ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಸಚಿನ್ ಶಂಕರ್ ಮಗದುಂ

ಅಜಿತ್ ಕುಮಾರ್ ರೈ ವಿರುದ್ಧ ಕರ್ನಾಟಕ ರಾಜ್ಯ ಕಂದಾಯ ಇಲಾಖೆ ಮತ್ತು ಇನ್ನೊಬ್ಬರು

ರಿಟ್ ಅರ್ಜಿಸಂಖ್ಯೆ: 50415/2019 (ಎಸ್-ಕೆ. ಎಸ್.ಟಿ.) ಇದರೊಂದಿಗೆ ಇತರೆ ದಿನಾಂಕ: 17ನೇ ಡಿಸೆಂಬರ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:

ಬೆಂಗಳೂರಿನ ಕರ್ನಾಟಕ ರಾಜ್ಯ ಆಡಳಿತ ನ್ಯಾಯಾಧಿಕರಣದ (ಸಂಕ್ಷಿಪ್ತವಾಗಿ ' ನ್ಯಾಯಾಧಿಕರಣ) ಕಡತದಲ್ಲಿನ ಅರ್ಜಿಸಂಖ್ಯೆ: 5566/2019, 4675/2019 ಮತ್ತು 5135/2019 ರಲ್ಲಿ ಹೊರಡಿಸಲಾದದಿನಾಂಕ: 22.10.2019 ರ ಸಾಮಾನ್ಯ ಆದೇಶವನ್ನು ಸದರಿ ವ್ಯವಹರಣೆಗಳ ಪಕ್ಷಕಾರರಲ್ಲಿ ಇಬ್ಬರು ಪ್ರಶ್ನಿಸಿದ್ದಾರೆ.ರಿಟ್ ಅರ್ಜಿಸಂಖ್ಯೆ: 50415/2019 ರಲ್ಲಿ ಒಂದನೇ ರಿಟ್ ಅರ್ಜಿಯನ್ನು ಅರ್ಜಿದಾರ ಅಜಿತ್ ಕುಮಾರ್ ರೈ ಸಲ್ಲಿಸಿದ್ದು, ಅವರು ನ್ಯಾಯಾಧಿಕರಣದ ಕಡತದಲ್ಲಿನ ಅರ್ಜಿಸಂಖ್ಯೆ: 5566/2013 ರಲ್ಲಿ ಎರಡನೇ ಎದುರುದಾರರಾಗಿದ್ದಾರೆ ಮತ್ತು ಅರ್ಜಿಸಂಖ್ಯೆ: 5135/2013 ರಲ್ಲಿಯೂ ಸಹ 2 ನೇ ಎದುರುದಾರರಾಗಿದ್ದಾರೆ.ರಿಟ್ ಅರ್ಜಿಸಂಖ್ಯೆ: 50415/2019 ರಲ್ಲಿ ಎರಡನೇ ರಿಟ್ ಅರ್ಜಿಯನ್ನು ಅರ್ಜಿದಾರ ಮಂಜುನಾಥ್ ಸಲ್ಲಿಸಿದ್ದು, ಅವರು ಅರ್ಜಿಸಂಖ್ಯೆ: 5566/2013 ರಲ್ಲಿ ಅರ್ಜಿದಾರರಾಗಿದ್ದಾರೆ ಮತ್ತು ಅರ್ಜಿಸಂಖ್ಯೆ: 4675/2019 ರಲ್ಲಿಯೂ ಸಹ ಎರಡನೇ ಎದುರುದಾರರಾಗಿದ್ದಾರೆ.ಈ ಮೇಲೆ ಹೇಳಲಾದ ಮೂರು ಅರ್ಜಿಗಳಲ್ಲಿ, ಈ ಇಬ್ಬರು ಅರ್ಜಿದಾರರಲ್ಲದೆ ಎಂ. ರಾಜಣ್ಣ ಎಂಬ ಹೆಸರಿನ ಇನ್ನೂ ಒಬ್ಬರು ಪ್ರತಿವಾದಿ ಪಕ್ಷಕಾರರೂ ಇದ್ದಾರೆ.ಅವರು ನ್ಯಾಯಾಧಿಕರಣದ ಕಡತದಲ್ಲಿನ ಅರ್ಜಿಸಂಖ್ಯೆ: 4675/2019 ಮತ್ತು 5135/2019 ರಲ್ಲಿ ಅರ್ಜಿದಾರರಾಗಿದ್ದಾರೆ.ಈ ಮೇಲೆ ಹೇಳಲಾದ ಮೂರು ಅರ್ಜಿಗಳನ್ನು ಒಟ್ಟಿಗೆ ಸೇರಿಸಿ,ದಿನಾಂಕ: 22.10.2019 ರ ಸಾಮಾನ್ಯ ಆದೇಶದ ಮೂಲಕ ವಿಲೇವಾರಿ ಮಾಡಲಾಯಿತು.

2. ಈ ಮೇಲೆ ಹೇಳಲಾದ ಮೂರು ಅರ್ಜಿಗಳಲ್ಲಿ ಮತ್ತು ಈ ಎರಡು ರಿಟ್ ಅರ್ಜಿಗಳಲ್ಲಿನ ವಾದಗಳಲ್ಲಿಯೂ ನ್ಯಾಯಾಧಿಕರಣವು ಹೊರಡಿಸಿದದಿನಾಂಕ: 22.10.2019 ರ ಸಾಮಾನ್ಯ ಆದೇಶವನ್ನು ಪರಿಶೀಲಿಸಿದ ಮೇಲೆ, ನ್ಯಾಯಾಲಯದ ಹಿರಿಯ ವಕೀಲರುಗಳು ನ್ಯಾಯಾಧಿಕರಣವು ಹೊರಡಿಸಿದದಿನಾಂಕ: 22.10.2019 ರ ಸದರಿ ಆದೇಶವನ್ನು ಸಮರ್ಥಿಸಲು ಮತ್ತು ವಿರೋಧಿಸಲು ತಮ್ಮ ಅಮೂಲ್ಯ ಸಮಯವನ್ನು ಮೀಸಲಿರಿಸಿರುವ ದೇವನಹಳ್ಳಿ ತಾಲ್ಲೂಕಿನ ತಹಶೀಲ್ದಾರ್ ಹುದ್ದೆಯು ಎಷ್ಟು ಅಮೂಲ್ಯವಾದುದು ಮತ್ತು ಮುಖ್ಯವಾದುದು ಎಂಬುದು ಈ ನ್ಯಾಯಾಲಯಕ್ಕೆ ಮೂಡಿದ ಮೊದಲ ಅಭಿಪ್ರಾಯವಾಗಿದೆ.

3. ನ್ಯಾಯಾಧಿಕರಣದ ಮುಂದೆ ಈ ಮೇಲೆ ಹೇಳಲಾದ ಮೂರು ಅರ್ಜಿಗಳನ್ನು ಹಾಗೂ ಅತಿ ಬೇಗನೆ ಸಲ್ಲಿಸಿದ್ದ ಮತ್ತು ಈ ಮೂರು ಅರ್ಜಿಗಳಿಗೆ ಮೂಲ ಕಾರಣವಾಗಿರುವ ಅರ್ಜಿಸಂಖ್ಯೆ: 659/2009 ರಲ್ಲಿನ ಇನ್ನೊಂದು ಅರ್ಜಿಯನ್ನು ಸಲ್ಲಿಸುವುದಕ್ಕೆ ಕಾರಣವೆಂದು ಕಂಡುಬಂದಿರುವಂತಹ ಸಂಕ್ಷಿಪ್ತ ಸಂಗತಿಗಳು ಈ ಕೆಳಗಿನಂತಿವೆ:

ದಿನಾಂಕ:28.12.2017 ರಂದು ಈ ಎರಡು ರಿಟ್ ಅರ್ಜಿಗಳಲ್ಲಿ ಎರಡನೇ ಎದುರುದಾರ ಎಂ.ರಾಜಣ್ಣ ಎಂಬುವವರಿಗೆ ಅತ್ಯಾಕಾಂಕ್ಷೆಯ ಹುದ್ದೆಯಾದ ದೇವನಹಳ್ಳಿ ತಾಲ್ಲೂಕಿನ ತಹಶೀಲ್ದಾರ್ ಹುದ್ದೆಯನ್ನು ನೀಡಲಾಯಿತು ಎಂಬುದನ್ನು ದಾಖಲೆಗಳು ತೋರಿಸುತ್ತವೆ.ಅವರು ಆ ಹುದ್ದೆಯಲ್ಲಿದಿನಾಂಕ: 25.01.2019 ರವರೆಗೆ ಯಾವುದೇ ಅಡ್ಡಿ-ಆತಂಕವಿಲ್ಲದೆ ಮುಂದುವರೆದರು ಎಂದು ಸೂಚಿಸಲಾಗಿದೆ.ಆ ದಿನ ಸರ್ಕಾರವು ಎಂ. ರಾಜಣ್ಣ ಅವರನ್ನು ದೇವನಹಳ್ಳಿ ತಾಲ್ಲೂಕಿನ ತಹಶೀಲ್ದಾರ್ ಹುದ್ದೆಯಿಂದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ಗೆ (ಜಿಎಐಎಲ್) ವರ್ಗಾವಣೆಗೊಳಿಸಿ ಅಧಿಸೂಚನೆಯನ್ನು ಹೊರಡಿಸಿತು.ಅವರನ್ನು ಇಎಐಎಲ್ಗೆ ವರ್ಗಾವಣೆ ಮಾಡುವಾಗ, ಜಿಎಐಎಲ್ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೇಶವಮೂರ್ತಿ ಎಂಬುವವರನ್ನು

ದೇವನಹಳ್ಳಿಯ ತಹಶೀಲ್ದಾರ್‌ರನ್ನಾಗಿ ನೇಮಕ ಮಾಡಿತು.ಈ ಅಧಿಸೂಚನೆಯುದಿನಾಂಕ: 28.01.2019 ರಂದು ಸಲ್ಲಿಸಲಾಗಿದ್ದ ಅರ್ಜಿಸಂಖ್ಯೆ: 659/2019 ರಲ್ಲಿನ ಆಕ್ಷೇಪಣೆಯ ಮುಖ್ಯ ವಿಷಯವಾಯಿತು.ಅದರಲ್ಲಿ,ದಿನಾಂಕ: 25.01.2019 ರ ವರ್ಗಾವಣೆಯ ಅಧಿಸೂಚನೆಗೆ ಮಧ್ಯೆ ಪ್ರವೇಶಿಸುವ ಅಗತ್ಯತೆಯಿದೆ ಎಂದು ಎಂ. ರಾಜಣ್ಣ ಅವರು ನ್ಯಾಯಾಧಿಕರಣದ ಮುಂದೆ ವಾದಿಸಿದ್ದರೂ ಸಹ, ಅವರ ತಾರ್ತಿಕ ಕೋರಿಕೆಯನ್ನು ಪರಿಗಣಿಸಿರಲಿಲ್ಲ.ಅಷ್ಟರಲ್ಲಾಗಲೇ ಕೇಶವಮೂರ್ತಿಯವರು ದೇವನಹಳ್ಳಿ ತಾಲ್ಲೂಕಿನ ತಹಶೀಲ್ದಾರ್ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡಾಗಿತ್ತು.

4. ಕೇಶವಮೂರ್ತಿಯವರು ದೇವನಹಳ್ಳಿಯ ತಹಶೀಲ್ದಾರ್‌ರಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ, ಚುನಾವಣಾ ಆಯೋಗದ ಕೋರಿಕೆಯ ಮೇರೆಗೆ ಸರ್ಕಾರವು ಇನ್ನೊಂದು ಅಧಿಸೂಚನೆಯನ್ನು ಹೊರಡಿಸಿತು.ದೇವನಹಳ್ಳಿ ತಹಶೀಲ್ದಾರರ ಹುದ್ದೆಯ ಪರಿಮಿತಿಗಳಲ್ಲಿಯೇ ಬರುವ ಬೆಂಗಳೂರು ಗ್ರಾಮಾಂತರದ ಅಧಿಕಾರ ವ್ಯಾಪ್ತಿಯೊಳಗೆ ಸಂಸತ್ ಚುನಾವಣೆ ನಡೆಯಬೇಕಿತ್ತು ಎಂಬ ದೃಷ್ಟಿಯಿಂದ,ದಿನಾಂಕ: 20.02.2019 ರಂದು ಸರ್ಕಾರವು ಸದರಿ ಅಧಿಸೂಚನೆಯನ್ನು ಹೊರಡಿಸಿತು ಮತ್ತು ಅದರಂತೆ, ಚುನಾವಣಾ ಅವಧಿಯಲ್ಲಿ ಕೇಶವಮೂರ್ತಿಯವರನ್ನು ವಕ್ಸ್ ಮಂಡಳಿಗೆ ಸ್ಥಳಾಂತರಗೊಳಿಸಿ, ಅವರ ಜಾಗಕ್ಕೆ ಕೆ. ಮಂಜುನಾಥ್ ಅವರನ್ನು ತಹಶೀಲ್ದಾರರನ್ನಾಗಿ ನೇಮಿಸಿ, ತಹಸೀಲ್ದಾರರ ಹುದ್ದೆಗೆ ಅಡಚಣೆ ಮಾಡಲಾಯಿತು.ಈ ವ್ಯವಸ್ಥೆ ಕೆಲಕಾಲ ಮುಂದುವರೆಯಿತು.

5. ಅದೇ ಸಮಯದಲ್ಲಿ, ಬೆಂಗಳೂರು ಗ್ರಾಮಾಂತರ ಚುನಾವಣಾ ಕ್ಷೇತ್ರಕ್ಕೆ ಚುನಾವಣೆಯ ಹಿನ್ನೆಲೆಯಲ್ಲಿ ಹೊರಡಿಸಲಾಗಿರುವದಿನಾಂಕ: 20.2.2019 ರ ಅಧಿಸೂಚನೆಯ ದೃಷ್ಟಿಯಿಂದ, ಅವರು ಸಲ್ಲಿಸಿದ ಅರ್ಜಿಯನ್ನು, ನ್ಯಾಯಾಧಿಕರಣದ ಮೊರೆ ಹೋಗುವ ಸಂದರ್ಭ ಉಂಟಾದಲ್ಲಿ, ತರುವಾಯದ ಹಂತದಲ್ಲಿ ನ್ಯಾಯಾಧಿಕರಣದ ಮೊರೆಹೋಗುವ ಸ್ವಾತಂತ್ರ್ಯದೊಂದಿಗೆ, ಹಿಂಪಡೆಯಲು ಅನುಮತಿಸಬಹುದು ಎಂದು ಸೂಚಿಸಿ, ನ್ಯಾಯಾಧಿಕರಣದ ಮುಂದೆ ಒಂದು ಮೆನೋವನ್ನು ಅರ್ಜಿದಾರ ಎಂ. ರಾಜಣ್ಣ ಅವರು ಅರ್ಜಿಸಂಖ್ಯೆ: 659/2019 ರ ಅರ್ಜಿಯಲ್ಲಿ ಸಲ್ಲಿಸಿದ್ದಾರೆ ಎಂದು ಕಂಡುಬಂದಿದೆ.ಎಂ. ರಾಜಣ್ಣ ಅವರು ಸಲ್ಲಿಸಿದ ಮೆಮೊ ಆಧಾರದ ಮೇಲೆ, ಅರ್ಜಿಸಂಖ್ಯೆ: 659/2019 ರಲ್ಲಿನ ಅರ್ಜಿಯನ್ನು ಹಿ ಂ ಪಡೆಯಲು ಅವರಿಗೆ ಅನುಮತಿ ನೀಡಲಾಯಿತು.ಅಲ್ಲಿಗೆ ಅದು ಮುಕ್ತಾಯಗೊಂಡಿದೆ.

6. ಆ ನಂತರ, ಸಂಸತ್ ಚುನಾವಣೆಯು ಪೂರ್ಣಗೊಂಡ ಬಳಿಕ ಕೇಶವಮೂರ್ತಿಯವರನ್ನುದಿನಾಂಕ: 27.05.2019 ರ ಅಧಿಸೂಚನೆಯ ಮೂಲಕ 20.02.2019 ರಂದು ಇದ್ದಂತೆ ಅವರ ಮೂಲಸ್ಥಾನಕ್ಕೆ ಅವರನ್ನು ಮರುನೇಮಕಗೊಳಿಸಲಾಯಿತು ಎಂದು ಕಂಡುಬಂದಿದೆ.ಆ ತರುವಾಯ, ಅವರುದಿನಾಂಕ: 31.07.2019 ರಂದು ವಯೋನಿವೃತ್ತಿ ಹೊಂದುವವರೆಗೂ ಆ ಹುದ್ದೆಯಲ್ಲಿ ಮುಂದುವರೆದರೆಂದು ಕಂಡುಬಂದಿದೆ.ಅದೇ ಸಮಯದಲ್ಲಿ,ದಿನಾಂಕ: 12.07.2019 ರಂದು ಸರ್ಕಾರವು ಇನ್ನೊಂದು ಅಧಿಸೂಚನೆಯನ್ನು ಹೊರಡಿಸಿತು.ಸದರಿ ಅಧಿಸೂಚನೆಯು ಕೇಶವಮೂರ್ತಿ ಅವರ ನಿವೃತ್ತಿಯ ನಂತರ ಜಾರಿಗೆ ಬರತಕ್ಕದ್ದೆಂಬ ಸೂಚನೆಯೊಂದಿಗೆ, ಮಂಜುನಾಥ್ ಎಂಬುವವರನ್ನು ದೇವನಹಳ್ಳಿಯ ತಹಸೀಲ್ದಾರರನ್ನಾಗಿ ನೇಮಿಸಿತು.ಎಂ. ರಾಜಣ್ಣ ಅವರು ಅರ್ಜಿಸಂಖ್ಯೆ: 4675/2019 ರಲ್ಲಿನ ಅರ್ಜಿಯನ್ನು ಸಲ್ಲಿಸುವ ಮೂಲಕ ಈ ಅಧಿಸೂಚನೆಯನ್ನು ಪ್ರಶ್ನಿಸಿದ್ದಾರೆ.ಅರ್ಜಿ ಸಲ್ಲಿಸುವಾಗ,ದಿನಾಂಕ: 12.07.2019 ರ ಅಧಿಸೂಚನೆಯನ್ನು ಮತ್ತುದಿನಾಂಕ: 25.01.2019 ರ ಅಧಿಸೂಚನೆಯನ್ನು ಸಹ ಅವರು ಪ್ರಶ್ನಿಸಿದ್ದು, ಅದರ ಮೇರೆಗೆ ಅವರನ್ನು ಜಿಎಐಎಲ್ಗೆ ಕಳುಹಿಸಲಾಯಿತು.ಸದರಿ ಅರ್ಜಿಯಲ್ಲಿ, ಅವರು ದೇವನಹಳ್ಳಿಯ ತಹಶೀಲ್ದಾರರನ್ನಾಗಿ ತಮ್ಮನ್ನು ಮರು ನೇಮಿಸಲು ತಮ್ಮ ಅರ್ಜಿಯನ್ನು ಪರಿಗಣಿಸಲು ಸಹ ಕೋರಿದರು.ಅವರ ಪರವಾಗಿದಿನಾಂಕ: 31.07.2019 ರಂದು ಮಧ್ಯಂತರ ಆದೇಶವನ್ನು ನೀಡಲಾಯಿತು ಎಂದು ಹೇಳಲಾಗಿದೆ.

7.ದಿನಾಂಕ: 31.07.2019 ರಂದು ನೀಡಲಾದ ಮಧ್ಯಂತರ ತಡೆಯಾಜ್ಞೆ ಆದೇಶವು ಆ ದಿನಾಂಕದಂದು ಯಾವುದೇ ಪರಿಣಾಮ ಬೀರಲಿಲ್ಲ ಎಂದು ಕಂಡು ಬಂದಿದೆ.ಈ ಮಧ್ಯೆ,ದಿನಾಂಕ: 12.07.2019 ರ ಅಧಿಸೂಚನೆಯನ್ನು ಮಾರ್ಪಾಡು ಮಾಡುವ ಮೂಲಕ ದೇವನಹಳ್ಳಿ ತಹಶೀಲ್ದಾರ್‌ನ್ನಾಗಿ ಅಜಿತ್ ಕುಮಾರ್ ರೈ ಅ ಅವರನ್ನು ನೇಮಕ ಮಾಡಿ ಸರ್ಕಾರವುದಿನಾಂಕ: 21.08.2019 ರಂದು ಮತ್ತೊಂದು ಅಧಿಸೂಚನೆಯನ್ನು ಹೊರಡಿಸಿತು.ಸದರಿ ಅಧಿಸೂಚನೆಯು ದೋಷಯುಕ್ತವಾಗಿದೆ ಮತ್ತು ಇದು ತನ್ನ ಹಿಂದಿನ ಅರ್ಜಿಸಂಖ್ಯೆ: 4675/2019 ರಲ್ಲಿ ನ್ಯಾಯಾಧಿಕರಣವು ಹೊರಡಿಸಿದದಿನಾಂಕ: 31.07.2019 ರ ಮಧ್ಯಂತರ ಆದೇಶಕ್ಕೆ

ವಿರುದ್ಧವಾಗಿದೆ ಎಂಬ ಹೇಳಿಕೆಯ ಮೇಲೆ, ಎಂ. ರಾಜಣ್ಣ ಅವರು ಅರ್ಜಿಸಂಖ್ಯೆ: 5135/2019 ರಲ್ಲಿ ಇನ್ನೊಂದು ಅರ್ಜಿಯನ್ನು ಸಲ್ಲಿಸುವ ಮೂಲಕ ಈ ಅಧಿಸೂಚನೆಯನ್ನೂ ಸಹ ಪ್ರಶ್ನಿಸಿದ್ದಾರೆ.

8. ಆ ತರುವಾಯ,ದಿನಾಂಕ: 12.07.2019 ರ ಆದೇಶದ ಫಲಾನುಭವಿಯಾದ ಮಂಜುನಾಥ್ ಅವರು ಅರ್ಜಿಸಂಖ್ಯೆ: 5566/2019 ರಲ್ಲಿ ಇನ್ನೊಂದು ಅರ್ಜಿಯನ್ನು ಸಲ್ಲಿಸಿದರೆಂದು ಕಂಡುಬಂದಿದೆ.ಅರ್ಜಿಸಂಖ್ಯೆ: 4675/2019, 5135/2019 ಮತ್ತು 5566/2019 ರ ಈ ಮೂರು ಅರ್ಜಿಗಳನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿದೆ ಮತ್ತುದಿನಾಂಕ: 22.10.2019 ರ ಆದೇಶದ ಮೂಲಕ ವಿಲೇ ಮಾಡಲಾಗಿದೆ.ಅವುಗಳಲ್ಲಿ, ಎಂ. ರಾಜಣ್ಣ ಅವರು ಸಲ್ಲಿಸಿದ್ದ ಅರ್ಜಿಸಂಖ್ಯೆ: 4675/2019 ಮತ್ತು 5135/2019 ನ್ನು ಪುರಸ್ಕರಿಸಲಾಗಿದೆ.ಹಾಗೆ ಮಾಡುವಾಗ, ಮಂಜುನಾಥ್ ಅವರು ಸಲ್ಲಿಸಿದ್ದ ಅರ್ಜಿಸಂಖ್ಯೆ: 5566/2019 ನ್ನು ತಿರಸ್ಕರಿಸಲಾಗಿದೆ.

9. ಈ ಹಿನ್ನೆಲೆಯಲ್ಲಿ, ಮಂಜುನಾಥ್ ಅವರು ತಮ್ಮ ಅರ್ಜಿಯನ್ನು ತಿರಸ್ಕರಿಸಿರುವ ಆದೇಶವನ್ನು ಪ್ರಶ್ನಿಸಿ ರಿಟ್ ಅರ್ಜಿಸಂಖ್ಯೆ: 51199/2019 ನ್ನು ಸಲ್ಲಿಸಿದ್ದಾರೆ.ಅಜಿತ್ ಕುಮಾರ್ ರೈ ಅವರು ರಿಟ್ ಅರ್ಜಿಸಂಖ್ಯೆ: 50415/2019 ನ್ನು ಸಲ್ಲಿಸಿದ್ದು, ಅವರದಿನಾಂಕ: 21.8.2019 ರ ನೇಮಕಾತಿ ಆದೇಶವನ್ನು ತಡೆಹಿಡಿಯಲಾಗಿದೆ.ಅರ್ಜಿಸಂಖ್ಯೆ: 4675 ಮತ್ತು 5135/2019 ರಲ್ಲಿ ಎಂ. ರಾಜಣ್ಣ ಅವರು ಸಲ್ಲಿಸಿದ ಅರ್ಜಿಗಳಲ್ಲಿ ಅವರ ವಿನಂತಿಯ ಮೇರೆಗೆ ಹಾಗೆ ಮಾಡಲಾಗಿದೆ.ಮಂಜುನಾಥ್ ಮತ್ತು ಅಜಿತ್ ಕುಮಾರ್ ರೈ ಅವರು ಸಲ್ಲಿಸಿರುವ ಈ ಎರಡು ರಿಟ್ ಅರ್ಜಿಗಳಲ್ಲಿ ಎಂ. ರಾಜಣ್ಣ, ಸಾಮಾನ್ಯ ಎರಡನೇ ಎದುರುದಾರರಾಗಿದ್ದು, ಅವರುದಿನಾಂಕ: 22.10.2019 ರ ಆದೇಶದ ಫಲಾನುಭವಿಯಾಗಿದ್ದಾರೆ.

10. ಅರ್ಜಿದಾರ-ಮಂಜುನಾಥ್ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಎ.ಎಸ್. ಪೊನ್ನಣ್ಣ, ಅರ್ಜಿದಾರ-ಅಜಿತ್ ಕುಮಾರ್ ರೈ ಅವರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಶಿವಪ್ರಸಾದ್ ಶಾಂತನಗೌಡರ್ ಮತ್ತು 120 ಅಜಿತ್ ಕುಮಾರ್ ರೈ -ವಿರುದ್ಧ ಕರ್ನಾಟಕ ರಾಜ್ಯ ಕಂದಾಯ ಇಲಾಖೆ ಮತ್ತು ಇನ್ನೊಬ್ಬರು ಎರಡನೇ ಎದುರುದಾರ ಎಂ. ರಾಜಣ್ಣ ಪರ ಮಾನ್ಯ ಹಿರಿಯ ವಕೀಲರಾದ ಶ್ರೀ ಕೆ.ಎನ್. ಫಣೀಂದ್ರ ಅವರ ವಾದಗಳನ್ನು ಆಲಿಸಲಾಗಿದೆ.

11. ಈ ಎಲ್ಲಾ ವ್ಯವಹರಣೆಗಳು, ಕಂದಾಯ ಇಲಾಖೆಯಲ್ಲಿ ಒಂದು ಹುದ್ದೆಯಿಂದ ಇನ್ನೊಂದು ಹುದ್ದೆಗೆ ಅಧಿಕಾರಿಗಳ ವರ್ಗಾವಣೆಯು ಎಷ್ಟು ಕರಾಳ ಮತ್ತು ನಾಚಿಕೆಗೇಡಿನ ಸಂಗತಿಯಾಗಿದೆಯೆಂದು ಸ್ಪಷ್ಟವಾಗಿ ಬಹಿರಂಗಪಡಿಸುತ್ತವೆ.ಇಲಾಖೆಯೇ ಹಾಳಾದರೂ ಲೆಕ್ಕಿಸದೆ ಮತ್ತು ಈ ವ್ಯಾಜ್ಯಗಳ ಖರ್ಚು ವೆಚ್ಚಗಳನ್ನು ಹಾಗೂ ಸದರಿ ಹುದ್ದೆಯನ್ನು ಗಳಿಸುವಲ್ಲಿ ಅವರು ಭರಿಸುವ ವೆಚ್ಚಗಳ ಆಘಾತವನ್ನು ಅಂತಿಮವಾಗಿ ಹೊರಬೇಕಾದ ಸಾಮಾನ್ಯ ಜನರ ಹಿತಾಸಕ್ತಿಯನ್ನು ಲೆಕ್ಕಿಸದೆ ತಮಗೆ ಬೇಕಾದ ವ್ಯಕ್ತಿಗಳಿಗೆ ಹುದ್ದೆಯನ್ನು ಮಾರಲು ಪ್ರಯತ್ನಿಸುವಲ್ಲಿ ಅಧಿಕಾರಿಗಳ ದುರಾಸೆಯಿಂದ ಇಡೀ ವ್ಯವಸ್ಥೆ ಹೇಗೆ ಹಾಳಾಗಿಹೋಗಿದೆ ಎಂಬುದನ್ನು ಸ್ಪಷ್ಟವಾಗಿ ಹೊರಗೆಡಹುತ್ತದೆ.ಅಂಗೀಕರಿಸಲಾದಂತೆ, ಈ ಎಲ್ಲಾ ಹಣವನ್ನು ವ್ಯಾಜ್ಯಕಾರರು ತಮ್ಮ ಸ್ವಂತ ಹಣದಿಂದ ಖರ್ಚು ಮಾಡುವುದಿಲ್ಲ.ಅದನ್ನು ಸಾಮಾನ್ಯ ವ್ಯಕ್ತಿಯಿಂದ ಬಲವಂತವಾಗಿ ಮತ್ತು ಕಾನೂನುಬಾಹಿರವಾಗಿ ಸುಲಿಗೆ ಮಾಡಿರುವ ಹಣದಿಂದ ಖರ್ಚು ಮಾಡಲಾಗುತ್ತದೆ ಮತ್ತು ಈ ಹಿನ್ನೆಲೆಯಲ್ಲಿ, ಹೆಚ್ಚಿನ ನ್ಯಾಯಾಲಯಗಳು ಮಹತ್ವಪೂರ್ಣವಾದ ಮತ್ತು ಜವಾಬ್ದಾರಿಯ ವ್ಯಾಜ್ಯಗಳನ್ನು ಬದಿಗಿರಿಸಿ, ಈ ಕ್ಷುಲ್ಲಕ ವ್ಯಾಜ್ಯಗಳನ್ನು ತೀರ್ಮಾನಿಸುವ, ಬಗೆಹರಿಸುವ ಹೊಣೆಗಾರಿಕೆಯನ್ನು ಹೊರಬೇಕಾಗಿರುವುದರಿಂದ, ಅವರು ಅವುಗಳ ಅಮೂಲ್ಯ ಸಮಯವನ್ನು ಸಹ ವ್ಯರ್ಥ ಮಾಡುತ್ತಾರೆ.

12. ಪ್ರಸ್ತುತ ಪ್ರಕರಣಕ್ಕೆ ಬಂದಾಗ,ದಿನಾಂಕ: 28.12.2017 ರಂದು ಇದ್ದಂತೆ ಎಂ. ರಾಜಣ್ಣ ಅವರನ್ನು ದೇವನಹಳ್ಳಿಯ ತಹಸೀಲ್ದಾರ್ ಹುದ್ದೆಗೆ, ಮೊದಲ ಬಾರಿಗೆ ನೇಮಿಸಲಾಯಿತು.ಅವರುದಿನಾಂಕ: 25.01.2019 ರ ವರೆಗೆ ಆ ಹುದ್ದೆಯಲ್ಲಿ ಮುಂದುವರೆದರು ಎಂಬುದು ಸಹ ವಿವಾದದಲ್ಲಿಲ್ಲ.ದಿನಾಂಕ: 25.01.2019 ರಂದು ಅವರನ್ನು ಜಿಎಐಎಲ್ಗೆ ಆ ಹುದ್ದೆಯಲ್ಲಿದ್ದ ಕೇಶವ ಮೂರ್ತಿಯವರ ಜಾಗಕ್ಕೆ ವರ್ಗಾಯಿಸಲಾಯಿತು.ಅದಕ್ಕೆ ಪ್ರತಿಯಾಗಿ ಕೇಶವ ಮೂರ್ತಿಯವರನ್ನು ಅದೇ ಅಧಿಸೂಚನೆಯ ಮೇರೆಗೆ ದೇವನಹಳ್ಳಿ ತಹಶೀಲ್ದಾರರನ್ನಾಗಿ ನೇಮಿಸಲಾಯಿತು.ದಿನಾಂಕ: 28.01.2019 ರಂದು ಎಂ.ರಾಜಣ್ಣ ಅವರು ಸಲ್ಲಿಸಿದ ಅರ್ಜಿಸಂಖ್ಯೆ: 659/2019 ರಲ್ಲಿ ಅದು ಪ್ರಶ್ನೆಯ ಮುಖ್ಯ ವಿಷಯವಾಗಿದ್ದಾಗ್ಯೂ, ಸದರಿ ಅಧಿಸೂಚನೆಯನ್ನು ಜಾರಿಗೆ ತರಲಾಯಿತು ಎಂದು ಕಂಡುಬಂದಿದೆ.ಅವರು ಸದರಿ ಅರ್ಜಿಯನ್ನು ಸಲ್ಲಿಸಿದಾಗ, ಅವರನ್ನು ಜಿಎಐಎಲ್ಗೆ ವರ್ಗಾಯಿಸುವ ಅಧಿಸೂಚನೆಯನ್ನು ತಡೆಹಿಡಿಯಲು ಅವರು ಕೋರಿದ್ದರೂ, ಸದರಿ ಅರ್ಜಿಯನ್ನು ಪರಿಗಣಿಸಿರಲಿಲ್ಲ ಎಂದು

ಕಂಡುಬಂದಿದೆ.ಮುಖ್ಯ ಅರ್ಜಿಯು ಇನ್ನೂ ಪರಿಗಣನೆಗೆ ಬಾಕಿ ಇರುವಾಗ, ಅವರನ್ನು ಜಿಎಐಎಲ್ಗೆ ವರ್ಗಾಯಿಸಲಾಯಿತು ಮತ್ತು ಕೇಶವಮೂರ್ತಿ ಅವರು ದೇವನಹಳ್ಳಿಯ ತಹಸೀಲ್ದಾರರಾಗಿ ಅಧಿಕಾರವನ್ನು ವಹಿಸಿಕೊಂಡರು.

13. ಆ ನಂತರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂಸದೀಯ ಸ್ಥಾನಕ್ಕೆ ಚುನಾವಣೆಯ ಕಾರಣ ತಾತ್ಕಾಲಿಕವಾಗಿ ಕೇಶವಮೂರ್ತಿ ಅವರನ್ನು ವಕ್ಫ್ ಮಂಡಳಿಗೆ ವರ್ಗಾಯಿಸಿದಿನಾಂಕ: 20.02.2019 ರಂದು ಮತ್ತೊಂದು ಅಧಿಸೂಚನೆಯನ್ನು ಹೊರಡಿಸಲಾಯಿತು.ಈ ಹಿನ್ನೆಲೆಯಲ್ಲಿ,ದಿನಾಂಕ: 20.2.2019 ರ ಅಧಿಸೂಚನೆಯ ಮೂಲಕ ಕೇಶವಮೂರ್ತಿ ಅವರನ್ನು ವರ್ಗಾಯಿಸಲಾಯಿತು.ಸದರಿ ಅಧಿಸೂಚನೆಯನ್ನು ಬಳಸಿಕೊಂಡು, ಎಂ. ರಾಜಣ್ಣ ಅವರು ನ್ಯಾಯಾಲಯಕ್ಕೆ ಮೊರೆ ಹೋಗುವ ಸಂದರ್ಭ ಉಂಟಾದಲ್ಲಿ, ಹಾಗೆ ಮಾಡುವ ಸ್ವಾತಂತ್ರ್ಯವನ್ನು ಕೋರಿ, ತಾವು ಸಲ್ಲಿಸಿದ್ದ ಅರ್ಜಿಯನ್ನು ಹಿಂತೆಗೆದುಕೊಂಡರು.

14. ವಾಸ್ತವವಾಗಿ,ದಿನಾಂಕ: 20.02.2019 ರ ಅಧಿಸೂಚನೆಯು ತಮ್ಮ ಅರ್ಜಿಸಂಖ್ಯೆ: 659/2019 ನ್ನು ಮುಂದುವರೆಸುವ ತಮ್ಮ ಹಕ್ಕಿನ ಮೇಲೆ ಪರಿಣಾಮ ಬೀರಿಲ್ಲ ಎಂಬ ಕಾರಣಕ್ಕಾಗಿ ಸದರಿ ಅರ್ಜಿಯನ್ನು ಹಿಂಪಡೆಯಲು ನ್ಯಾಯಾಧಿಕರಣವು ಅನುಮತಿ ನೀಡಬಾರದಿತ್ತು.ಇದು ಅರ್ಜಿಸಂಖ್ಯೆ: 659/2019 ನ್ನು ಹಿಂಪಡೆಯಲು ಅವರಿಗೆ ಅನುಮತಿ ನೀಡುವಲ್ಲಿ ಮತ್ತು ಅವರ ಆಶಯಗಳು ಹಾಗೂ ಮನೋಭಾವಗಳಿಗೆ ತಕ್ಕಂತೆ ದಾವೆ ಹೂಡಲು ಅವರಿಗೆ ಸ್ವಾತಂತ್ರ್ಯವನ್ನು ಕಾಯ್ದಿರಿಸುವಲ್ಲಿ ನ್ಯಾಯಾಧಿಕರಣವು ಮೊದಲ ಪ್ರಮಾದವನ್ನು ಎಸಗಿದೆ.ಆ ನಂತರ ದೇವನಹಳ್ಳಿಯ ತಹಸೀಲ್ದಾರ್ ಹುದ್ದೆಯಿಂದ ತಾತ್ಕಾಲಿಕವಾಗಿ ವರ್ಗಾವಣೆಗೊಂಡ ಕೇಶವಮೂರ್ತಿ ಅವರನ್ನುದಿನಾಂಕ: 27.05.2019 ರ ಅಧಿಸೂಚನೆಯ ಮೂಲಕ ಅವರ ಸ್ಥಾನಕ್ಕೆ ಮತ್ತೆ ನೇಮಿಸಲಾಯಿತು ಮತ್ತು ಅವರು ವಯೋನಿವೃತ್ತಿ ಹೊಂದಿದ ದಿನಾಂಕವಾದ 31.7.2019 ರವರೆಗೆ ತಹಶೀಲ್ದಾರ್ರಾಗಿ ಆ ಹುದ್ದೆಯಲ್ಲಿ ಕೆಲಸ ಮಾಡುವುದನ್ನು ಮುಂದುವರೆಸಿದ್ದರು ಎಂದು ಕಂಡುಬಂದಿದೆ.

15. ಈ ಮಧ್ಯೆ, ದೇವನಹಳ್ಳಿ ತಾಲ್ಲೂಕಿನ ತಹಶೀಲ್ದಾರರನ್ನಾಗಿ ಮಂಜುನಾಥ್ ಅವರನ್ನು (ರಿಟ್ ಅರ್ಜಿಸಂಖ್ಯೆ: 51199/2019 ರಲ್ಲಿ ಅರ್ಜಿದಾರರು) ನೇಮಿಸಿ,ದಿನಾಂಕ: 12.07.2019 ರ ಅಧಿಸೂಚನೆಯನ್ನು ಹೊರಡಿಸಿದ್ದು, ಅದು ಅರ್ಜಿಸಂಖ್ಯೆ: 4675/2019 ರಲ್ಲಿ ಎಂ. ರಾಜಣ್ಣ ಅವರ ಆಕ್ಷೇಪಣೆಯ ಮುಖ್ಯ ವಿಷಯವಾಗಿತ್ತು.ಅಂಗೀಕರಿಸಲಾದಂತೆ, ಆ ದಿನಾಂಕದಂದು ಎಂ. ರಾಜಣ್ಣ ಅವರು ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಯನ್ನು ಹೊಂದಿರಲಿಲ್ಲ.ಆದುದರಿಂದ,ದಿನಾಂಕ: 12.7.2019 ರ ಸರ್ಕಾರಿ ಅಧಿಸೂಚನೆಯನ್ನು ತಡೆಹಿಡಿದು, ಆತನ ಅನುಕೂಲಕ್ಕಾಗಿ ಮಧ್ಯಂತರ ಆದೇಶ ನೀಡಲು ಅವರ ಅರ್ಜಿಯನ್ನು ಪರಿಗಣಿಸಲು ನ್ಯಾಯಾಧಿಕರಣಕ್ಕೆ ಯಾವುದೇ ಕಾರಣವಿರಲಿಲ್ಲ.ಅದು ನ್ಯಾಯಾಧಿಕರಣವು ಎಸಗಿದ ಮತ್ತೊಂದು ಪ್ರಮಾದವಾಗಿದೆ.ಮೇಲೆ ಹೇಳಲಾದ ಮಧ್ಯಂತರ ಆದೇಶದಿಂದಾಗಿ ಮತ್ತಷ್ಟು ಗೊಂದಲ ಉಂಟಾಗಿದೆ ಎಂದು ಕಂಡುಬಂದಿದೆ.

16. ಈ ಮಧ್ಯಂತರ ಆದೇಶವು ಜಾರಿಯಲ್ಲಿದ್ದಾಗ, ಸರ್ಕಾರವುದಿನಾಂಕ: 12.07.2019 ರ ಮೊದಲಿನ ಅಧಿಸೂಚನೆಯನ್ನು ಮಾರ್ಪಡಿಸಿ ಅಜಿತ್ ಕುಮಾರ್ ರೈ ಎಂಬುವವರನ್ನು ದೇವನಹಳ್ಳಿ ತಾಲ್ಲೂಕಿನ ತಹಸೀಲ್ದಾರರನ್ನಾಗಿ ನೇಮಿಸಿದಿನಾಂಕ: 21.08.2019 ರಂದು ಮತ್ತೊಂದು ಅಧಿಸೂಚನೆಯನ್ನು ಹೊರಡಿಸಿತು.ಅದರ ಮೇರೆಗೆ ಮಂಜುನಾಥ್ ಅವರನ್ನು ಅದೇ ಹುದ್ದೆಗೆ ನೇಮಿಸಲಾಯಿತು ಮತ್ತುದಿನಾಂಕ: 26.07.2019 ರಂದು ಪ್ರಧಾನ ಕಾರ್ಯದರ್ಶಿಯವರು 1 ನೇ ಜುಲೈ, 2019 ರ ತರುವಾಯ ಹೊರಡಿಸಿದ ವರ್ಗಾವಣೆ ಆದೇಶಗಳನ್ನು ಜಾರಿಗೆ ತರಕೂಡದು ಎಂಬ ಸೂಚನೆ ನೀಡಿ ಮಾರ್ಗಸೂಚಿಗಳನ್ನು ಹೊರಡಿಸಿದ್ದಾರೆಂಬ ನೆಪದಲ್ಲಿದಿನಾಂಕ: 21.08.2019 ರಲ್ಲಿ ಸದರಿ ಅಧಿಸೂಚನೆಯನ್ನು ಹೊರಡಿಸಲಾಯಿತು.ಯಾವುದೇ ಸಂದರ್ಭದಲ್ಲಿ, ಅಂಗೀಕರಿಸಲಾದಂತೆ, ಅರ್ಜಿಸಂಖ್ಯೆ: 4675/2019 ರಲ್ಲಿ ಹೊರಡಿಸಲಾದದಿನಾಂಕ: 31.07.2019 ರ ಮಧ್ಯಂತರ ಆದೇಶವು ಜಾರಿಯಲ್ಲಿದ್ದಾಗ, ಸದರಿ ಅಧಿಸೂಚನೆಯನ್ನು ಹೊರಡಿಸಲಾಯಿತು.ಅರ್ಜಿಸಂಖ್ಯೆ: 4675/2019 ರಲ್ಲಿ ಹೊರಡಿಸಲಾದ ಮಧ್ಯಂತರ ಆದೇಶವು ದೋಷಪೂರ್ಣವಾಗಿತ್ತೆಂದು ಈ ನ್ಯಾಯಾಲಯವು ಭಾವಿಸಿದ್ದಾಗ್ಯೂ, ಅದು ಜಾರಿಯಲ್ಲಿದ್ದುದರಿಂದ, ಸರ್ಕಾರವು ಮತ್ತೊಮ್ಮೆದಿನಾಂಕ: 21.08.2019 ರ ಅಧಿಸೂಚನೆಯನ್ನು ಹೊರಡಿಸುವಲ್ಲಿ ಹರಸಾಹಸ ಪಡಬೇಕಾಗಿರಲಿಲ್ಲ.ಅದು ಅರ್ಜಿಸಂಖ್ಯೆ: 4675/2019 ರಲ್ಲಿ ಅರ್ಜಿದಾರರಾದ ಎಂ. ರಾಜಣ್ಣ ಅವರದಿನಾಂಕ:

21.08.2019 ರ ಅಧಿಸೂಚನೆಯನ್ನು ಪ್ರಶ್ನಿಸಿ, ಅರ್ಜಿಸಂಖ್ಯೆ: 5135/2019 ರ ಮತ್ತೊಂದು ಅರ್ಜಿಯನ್ನು ಸಲ್ಲಿಸುವಷ್ಟರಮಟ್ಟಿಗೆ ಮುಂದಿನ ದಾವೆಗೆ ಅವಕಾಶವನ್ನು ನೀಡಿದೆ.

17.ದಿನಾಂಕ: 12.07.2019 ರ ಅಧಿಸೂಚನೆಯ ಫಲಾನುಭವಿಯಾದ ಮಂಜುನಾಥ್ ಅವರೂ ಸಹ ತಮಗೆ ಪ್ರಯೋಜನಕಾರಿಯಾಗಿದ್ದದಿನಾಂಕ: 12.07.2019 ರ ಮೊದಲಿನ ಅಧಿಸೂಚನೆಯನ್ನು ಮಾರ್ಪಡಿಸಿದಿನಾಂಕ: 21.08.2019 ರ ಅಧಿಸೂಚನೆಯನ್ನು ಹೊರಡಿಸಲಾಗಿದೆ ಎಂಬ ಸರಳವಾದ ಕಾರಣಕ್ಕೆ ಅರ್ಜಿಸಂಖ್ಯೆ: 5566/2019 ರಲ್ಲಿ ಮತ್ತೊಂದು ಅರ್ಜಿಯನ್ನು ಸಲ್ಲಿಸಿದ್ದಾರೆ.ಈ ಮೂರು ಅರ್ಜಿಗಳನ್ನು ಅಂತಿಮ ವಿಲೇವಾರಿಗೆ ನ್ಯಾಯಾಧಿಕರಣವು ಪರಿಗಣನೆಗೆ ತೆಗೆದುಕೊಂಡಿದ್ದು, ಅಲ್ಲಿ ಅರ್ಜಿಸಂಖ್ಯೆ: 4675 ಮತ್ತು 5135/2019 ರಲ್ಲಿ ಎಂ. ರಾಜಣ್ಣ ಅವರು ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲು ನ್ಯಾಯಾಧಿಕರಣವು ಮುಂದಾಗಿದೆ.

18. ಈಗ ನ್ಯಾಯಾಧಿಕರಣವು ಹೊರಡಿಸಿದ ಆದೇಶದ ಈ ಭಾಗವನ್ನು ಗಮನಿಸಿದರೆ, ನ್ಯಾಯಾಧಿಕರಣವು ಹೊರಡಿಸಿದ ಆದೇಶವು ಆ ಎರಡು ಅರ್ಜಿಗಳಲ್ಲಿ ಪ್ರಶ್ನಿತವಾಗಿದ್ದ ಅಧಿಸೂಚನೆಯ ಮಟ್ಟಿಗೆ ದೋಷಪೂರ್ಣವಾಗಿದ್ದು, ಅದು ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಯಿಂದ ಎಂ. ರಾಜಣ್ಣ ಅವರ ವರ್ಗಾವಣೆಯ ಮೊದಲ ಅಧಿಸೂಚನೆಯಾದದಿನಾಂಕ: 25.01.2019 ರ ಅಧಿಸೂಚನೆಯಾಗಿದ್ದು, ಅದು ಕೇಶವಮೂರ್ತಿಗೆ ಸದರಿ ಹುದ್ದೆಯನ್ನು ಆಕ್ರಮಿಸಿಕೊಳ್ಳಲು ಹಾಗೂ 31.07.2019 ರ ವರೆಗೂ ಮುಂದುವರೆಯಲು ಅನುಮತಿಸುವಲ್ಲಿ ಅದು ಜಾರಿಗೆ ಬಂದಿತ್ತು ಎಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿದೆ.ಅರ್ಜಿಸಂಖ್ಯೆ: 659/2019 ರಲ್ಲಿ ಜನವರಿ ತಿಂಗಳಿನಲ್ಲಿ ಎಂ. ರಾಜಣ್ಣ ಸಲ್ಲಿಸಿದ ಅರ್ಜಿಯನ್ನು ಹಿಂತೆಗೆದುಕೊಳ್ಳುವಲ್ಲಿ ಅವರು ಕಿತಾಪತಿ ಮಾಡಿದ್ದರೂ, ಅವರು ಸಲ್ಲಿಸಿದ ಅರ್ಜಿಯನ್ನು ಹಿಂಪಡೆಯಲು ಅವರಿಗೆ ಅನುಮತಿ ನೀಡುವಲ್ಲಿ ಅವರ ಕೃತ್ಯಕ್ಕೆ ನ್ಯಾಯಾಧಿಕರಣವು ಬಲಿಪಶುವಾಗಿದೆ.ಹಾಗೆ ಮಾಡುವಾಗ, ವ್ಯಾಜ್ಯ ಕಾರಣವಿದ್ದಲ್ಲಿ, ಅವರಿಗೆ ನ್ಯಾಯಾಲಯದ ಮೊರೆಹೋಗುವ ಸ್ವಾತಂತ್ರ್ಯವನ್ನು ಕಾಯ್ದಿರಿಸುವುದು ನ್ಯಾಯಾಧಿಕರಣವು ಎಸಗಿದ ಮುಂದಿನ ಪ್ರಮಾದವಾಗಿದೆ.

19. ರಾಜಣ್ಣ ಅವರಿಗೆ ವ್ಯಾಜ್ಯಕಾರಣ ಇರುತ್ತದೆ ಎಂಬುದನ್ನು ಈ ನ್ಯಾಯಾಲಯವು ಅರ್ಥಮಾಡಿಕೊಳ್ಳಲು ಅಸಮರ್ಥವಾಗಿದೆ ಎಂದು ನ್ಯಾಯಾಧಿಕರಣವು ಹೇಗೆ ಭಾವಿಸಿತು?ಎಂಬುದು ಇಲ್ಲಿ ಗಮನಿಸಬೇಕಾದ ಸನ್ನಿವೇಶವಾಗಿದೆ.ನ್ಯಾಯಾಧಿಕರಣಕ್ಕೆ ಹಾಗೂ ಈ ನ್ಯಾಯಾಲಯಕ್ಕೆ ಮತ್ತಷ್ಟು ಕಿರುಕುಳ ನೀಡಲು ಈ ಆಸೆಬುರುಕ ಅಧಿಕಾರಿಗೆ ಅಂಥ ಸ್ವಾತಂತ್ರವನ್ನು ಕಾಯ್ದಿರಿಸುವಲ್ಲಿ ನ್ಯಾಯಾಧಿಕರಣದ ಕಡೆಯಿಂದ ವಿವೇಚನೆಯ ಅಭಾವವನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ.ಹೀಗಾಗಿ, ಆದೇಶದ ಆ ಭಾಗವು ದೋಷಪೂರ್ಣವಾಗಿದೆ.ಅದು ಅರ್ಜಿಸಂಖ್ಯೆ: 4675 ಮತ್ತು 5135/2019 ರಲ್ಲಿ ಇನ್ನಷ್ಟು ದೋಷಪೂರ್ಣ ಆದೇಶವನ್ನು ಹೊರಡಿಸುವಲ್ಲಿ ಮುಂದುವರೆದಿದೆ.

20. ಅಂಗೀಕರಿಸಲಾದಂತೆ, ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಗೆ ಮಂಜುನಾಥ್ ಅವರನ್ನು ವರ್ಗಾವಣೆ ಮಾಡಲು 12.07.2019 ರಂದು ಅಧಿಸೂಚನೆಯನ್ನು ಹೊರಡಿಸಿದಾಗ, ಅದನ್ನು ಪ್ರಶ್ನಿಸಲು ಎಂ. ರಾಜಣ್ಣ ಅವರಿಗೆ ಯಾವುದೇ ಹಕ್ಕಿರಲಿಲ್ಲ.ವಾಸ್ತವವಾಗಿ, ಎಂ. ರಾಜಣ್ಣ ಅವರು ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಯನ್ನು ಹೊಂದಿರಲಿಲ್ಲ.ಆದುದರಿಂದ, ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಗೆ ಅಧಿಕಾರಿಯನ್ನು ವರ್ಗಾವಣೆ ಮಾಡುವಲ್ಲಿ ಇನ್ನಷ್ಟು ಗೊಂದಲ ಹುಟ್ಟಿಸಲು ಮಧ್ಯಂತರ ಆದೇಶವನ್ನು ಹೊರಡಿಸಲು ನ್ಯಾಯಾಧಿಕರಣಕ್ಕೆ ಯಾವುದೇ ಕಾರಣವಿರಲಿಲ್ಲ.ಉರಿಯುತ್ತಿರುವ ಬೆಂಕಿಗೆ ತುಪ್ಪ ಸುರಿದಂತೆ ಸರ್ಕಾರವೂ ಸಹದಿನಾಂಕ: 21.08.2019 ರ ಮತ್ತೊಂದು ಅಧಿಸೂಚನೆಯನ್ನು ಹೊರಡಿಸಿದ್ದು, ಅದುದಿನಾಂಕ: 12.07.2019 ರ ಅಧಿಸೂಚನೆಯನ್ನು ಮಾರ್ಪಾಡು ಮಾಡಿ, ಅದರ ಮೇರೆಗೆ ಮಂಜುನಾಥ್ ಅವರನ್ನು ದೇವನಹಳ್ಳಿಯ ತಹಶೀಲ್ದಾರರನ್ನಾಗಿ ನೇಮಿಸಲಾಗಿತ್ತು.

21. ವಾಸ್ತವವಾಗಿ, ದಾಖಲೆಗಳು ಸೂಚಿಸಿರುವಂತೆದಿನಾಂಕ: 21.08.2019 ರ ಅಧಿಸೂಚನೆಯ ಮೂಲಕ ಮಾರ್ಪಾಡು ಮಾಡಲಾದದಿನಾಂಕ: 12.07.2019 ರ ಅಧಿಸೂಚನೆಗೆ ಸಂಬಂಧಿಸಿದಂತೆ, ನ್ಯಾಯಾಧಿಕರಣದ ಮತ್ತು ಈ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿದ್ದ ವ್ಯಾಜ್ಯಗಳು ಯಾವ ಹಂತದಲ್ಲಿವೆ?ಎಂಬುದನ್ನು ಖಚಿತಪಡಿಸಲುದಿನಾಂಕ: 21.08.2019 ರ ಅಧಿಸೂಚನೆಯನ್ನು ಹೊರಡಿಸಿದ ಅಧಿಕಾರಿಯು ಎಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿರಬೇಕಾಗಿತ್ತು.ಅಂಗೀಕರಿಸಲಾದಂತೆ,ದಿನಾಂಕ: 21.08.2019 ರ ಅಧಿಸೂಚನೆಯನ್ನು,ದಿನಾಂಕ: 31.07.2019 ರ ಮಧ್ಯಂತರ ಆದೇಶವು ಜಾರಿಯಲ್ಲಿದ್ದಾಗ

ಹೊರಡಿಸಲಾಯಿತು.ಹೀಗಾಗಿ,ದಿನಾಂಕ: 21.08.2019 ರ ಆದೇಶವನ್ನು ಹೊರಡಿಸಿದ ಅಧಿಕಾರಿಯು ಸದರಿ ಅಧಿಸೂಚನೆಯನ್ನು ಹೊರಡಿಸುವ ಕಷ್ಟ ತೆಗೆದುಕೊಳ್ಳಲೇಬಾರದಿತ್ತು.

22.ದಿನಾಂಕ: 21.08.2019 ರ ಅಧಿಸೂಚನೆಯ ಕರ್ತನ ವಿರುದ್ಧ ನಿಂದನಾ ವ್ಯವಹರಣೆಯನ್ನು ಹೂಡಲಾಗಿದೆ ಎಂಬುದನ್ನು ಈ ನ್ಯಾಯಾಲಯದ ಗಮನಕ್ಕೆ ತರಲಾಗಿದೆ.ಸದರಿ ಅಧಿಕಾರಿಯ ವಿರುದ್ಧದ ನಿಂದನಾ ವ್ಯವಹರಣೆಯನ್ನು ಪ್ರಾರಂಭಿಸಿದ್ದು ಸಂಪೂರ್ಣ ನ್ಯಾಯಯುತವಾಗಿದೆ ಎಂದು ಈ ನ್ಯಾಯಾಲಯವು ಎಚ್ಚರಿಕೆಯಿಂದ ಮತ್ತು ಸ್ಪಷ್ಟವಾಗಿ ದಾಖಲಿಸಿದೆ ಮತ್ತು ನ್ಯಾಯಾಲಯ ನಿಂದನೆಯು ಅದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತದೆ ಹಾಗೂ ಸದರಿ ಅಧಿಸೂಚನೆಯನ್ನು ಹೊರಡಿಸಿದ ಅಧಿಕಾರಿಯನ್ನು ಅವರ ಬೇಜವಾಬ್ದಾರಿ ಕೃತ್ಯಕ್ಕೆ ಹೊಣೆಗಾರನನ್ನಾಗಿ ಮಾಡಲಾಗಿದೆಯೆಂದು ಖಚಿತಪಡಿಸಿದೆ.

23. ಎಂ. ರಾಜಣ್ಣ ಅವರು ಸಲ್ಲಿಸಿದ ಅರ್ಜಿಸಂಖ್ಯೆ: 4675 ಮತ್ತು 5135/2019 ರಲ್ಲಿನ ಅರ್ಜಿಗಳಿಗೆ ಸಂಬಂಧಿಸಿದಂತೆ, ಈ ಮೇಲೆ ಚರ್ಚಿಸಲಾದಂತೆ, ಎಂ. ರಾಜಣ್ಣ ಅವರುದಿನಾಂಕ: 25.01.2019 ರಂದು ಒಮ್ಮೆ ದೇವನಹಳ್ಳಿಯ ತಹಸೀಲ್ದಾರ್ ಹುದ್ದೆಯಿಂದ ವರ್ಗಾವಣೆಗೊಂಡ ನಂತರ ಆ ಹುದ್ದೆಯ ಮೇಲೆ ಅವರು ಹಕ್ಕು ಅಥವಾ ಕ್ಲೇಮನ್ನು ಹೊಂದಿರಲಿಲ್ಲ.ಅಂಗೀಕರಿಸಲಾದಂತೆ, ಆ ನಂತರ ಕೇಶವಮೂರ್ತಿಯವರು ತಾತ್ಕಾಲಿಕವಾಗಿ ವರ್ಗಾವಣೆಗೊಂಡಾಗ ಚುನಾವಣಾ ಅವಧಿಯಲ್ಲಿ ಸ್ಥಾನಾಂತರ ಕಾಲವನ್ನು ಹೊರತುಪಡಿಸಿ, ದಿನಾ ೦ ಕ:31.07.2019 ರವರೆಗೂ ಸದರಿ ಹುದ್ದೆಯನ್ನು ಹೊಂದಿದ್ದರು.ಆದುದರಿಂದ,ದಿನಾಂಕ: 25.01.2019 ರಂದು ಇದ್ದಂತೆ ಎಂ. ರಾಜಣ್ಣ ಅವರು ಆ ಹುದ್ದೆಗೆ ಯಾವುದೇ ಹಕ್ಕನ್ನು ಹೊಂದಿದ್ದೇ ಆದಲ್ಲಿ ಅದು ಮುಕ್ತಾಯಗೊಂಡಿದೆ.ಆದ್ದರಿಂದ ಅ ಆ ಸ್ಥಾನಕ್ಕೆ ಯಾವುದೇ ಅಧಿಕಾರಿಯ ನೇಮಕವನ್ನು ಪ್ರಶ್ನಿಸಲು ಅವರಿಗೆ ಯಾವ ಹಕ್ಕೂ ಇಲ್ಲ. ಆ ಕಾರಣದಿಂದ,ದಿನಾಂಕ: 12.07.2019 ರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯಲ್ಲಿ ಅವರ ಪರವಾಗಿ ಮಧ್ಯಂತರ ಕೋರಿಕೆಯನ್ನು ನೀಡಿ ನ್ಯಾಯಾಧಿಕರಣವು ಹೇಗೆ ಪರಿಗಣಿಸಿತು?ಎಂಬುದು ಒಂದು ಒಗಟಾಗಿದೆ.ಅದೇನೇ ಆಗಿರಲಿ, ಈಗ ಅಗತ್ಯವಾಗಿ ಪರಿಗಣಿಸಬೇಕಾದುದೇನೆಂದರೆ, ದೇವನಹಳ್ಳಿಯ ತಹಶೀಲ್ದಾರ್ ಆಗಿ ನೇಮಕವಾಗಲು ಎಂ. ರಾಜಣ್ಣ ಅವರ ಆಪಾದಿಸಲಾದ ಹಕ್ಕನ್ನು ಗುರುತಿಸುವವರೆಗೆ, ನ್ಯಾಯಾಧಿಕರಣದ ಆದೇಶವನ್ನು, ಈ ಮೇಲೆ ಹೇಳಲಾದ ಚರ್ಚೆಯ ಹಿನ್ನೆಲೆಯಲ್ಲಿ ರದ್ದುಪಡಿಸಬೇಕಾದ ಅಗತ್ಯವಿದೆ.ತದನುಸಾರವಾಗಿ,ದಿನಾಂಕ: 22.10.2019 ರ ಆದೇಶದ ಮೂಲಕ ನ್ಯಾಯಾಧಿಕರಣದ ಕಡತದಲ್ಲಿನ ಅರ್ಜಿಸಂಖ್ಯೆ: 4675/2019 ಮತ್ತು 5135/2019 ರಲ್ಲಿ ಎಂ. ರಾಜಣ್ಣ ಅವರು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸುವಲ್ಲಿ ನ್ಯಾಯಾಧಿಕರಣದ ಆದೇಶವನ್ನು ಈ ಮೂಲಕ ರದ್ದುಪಡಿಸಲಾಗಿದೆ.

24. ಈಗ ಉಳಿದಿರುವುದೇನೆಂದರೆ,ದಿನಾಂಕ: 21.08.2019 ರ ಅಧಿಸೂಚನೆಗೆ ಅನುಸಾರವಾಗಿ ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಗೆ ಅಜಿತ್ ಕುಮಾರ್ ರೈ ಅವರನ್ನು ನೇಮಿಸಿರುವುದು ಮತ್ತುದಿನಾಂಕ: 12.07.2019 ರ ಅಧಿಸೂಚನೆಗೆ ಅನುಸಾರವಾಗಿ ಅದೇ ಹುದ್ದೆಗೆ ಮಂಜುನಾಥ್ ಅವರನ್ನು ನೇಮಿಸಿರುವುದು.ದಿನಾಂಕ: 12.07.2019 ರ ಅಧಿಸೂಚನೆಗೆ ಸಂಬಂಧಪಡುವಷ್ಟರಮಟ್ಟಿಗೆ,ದಿನಾಂಕ: 12.07.2019 ರಂದು ಇದ್ದಂತೆ, ಮಂಜುನಾಥ್ ಕಂದಾಯ ಇಲಾಖೆಗೆ ಸೇರಿದ ವ್ಯಕ್ತಿಯಲ್ಲಿ ಮತ್ತು ಅವರ ಮಾತೃ ಇಲಾಖೆಯಾದ ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ನಿಯೋಜಿಸಲಾದ ವ್ಯಕ್ತಿಯಾಗಿರುವ ಕಾರಣದಿಂದ ತಹಶೀಲ್ದಾರ್ ಹುದ್ದೆಗೆ ಮಂಜುನಾಥ್ ಅವರನ್ನು ಪರಿಗಣಿಸಲು ಸಾಧ್ಯವಿಲ್ಲ ಎಂಬ ಹೇಳಿಕೆಯ ಮೇಲೆ ಅಜಿತ್ಕುಮಾರ್ ರೈ ಅವರು ಅದನ್ನು ವಿರೋಧಿಸಿದ್ದಾರೆ.ಅವರ ಪ್ರಕಾರ, ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದ ಮಾರ್ಗಸೂಚಿಗಳ 6 (ಬಿ) ಅನುಸಾರದಿನಾಂಕ: 13.02.2013 ರ ಆದೇಶದ ಮೂಲಕ ಮಂಜುನಾಥ್ ಅವರನ್ನು ತಮ್ಮ ಮಾತೃ ಇಲಾಖೆಯಿಂದ ಕಂದಾಯ ಇಲಾಖೆಗೆ ನಿಯೋಜಿಸಲಾಯಿತು.ವರ್ಗಾವಣೆ ಮಾರ್ಗಸೂಚಿಗಳ 6 (ಬಿ) ( 1) ನ್ನು ಈ ಕೆಳಗಿನಂತೆ ಓದಲಾಗಿದೆ:

*6. ಸಕ್ಷಮ ಪ್ರಾಧಿಕಾರದ ಹೊಣೆಗಾರಿಕೆ:

ಸಕ್ಷಮ ಪ್ರಾಧಿಕಾರವು, ವರ್ಗಾವಣೆಗಳು/ನಿಯೋಜನೆಗಳನ್ನು ಮಾಡುವಾಗ ಅಥವಾ ನೇಮಕಾತಿಗಳನ್ನು ಮಾಡುವಾಗ ಈ ಕೆಳಗಿನಂತೆ ಇನ್ನಷ್ಟು ಖಚಿತಪಡಿಸಿಕೊಳ್ಳಬಹುದು, (ಎ) (ಬಿ) ನಿರ್ದಿಷ್ಟವಾದ ಹುದ್ದೆಗೆ ನಿಯೋಜನೆಯ ಗರಿಷ್ಠ ಅವಧಿಯು ಒಂದು ಬಾರಿಗೆ ಐದು ವರ್ಷಗಳಾಗಿರತಕ್ಕದ್ದು.

i. ಒಬ್ಬ ಸರ್ಕಾರಿ ನೌಕರನು ಹಿಂದಿನ ನಿಯೋಜನೆಯಲ್ಲಿ ಐದು ವರ್ಷಗಳನ್ನು ಪೂರ್ಣಗೊಳಿಸಿರದಿದ್ದರೂ ಸಹ,

ಕಳೆದ ನಿಯೋಜನೆಯ ಮುಕ್ತಾಯದ ನಂತರ ತನ್ನ ಮಾತೃ ಇಲಾಖೆಯಲ್ಲಿ ಎರಡು ವರ್ಷಗಳ ಕೂಲಿಂಗ್ ಆಫ್ ಅವಧಿಯನ್ನು ಪೂರ್ಣಗೊಳಿಸಿರದಿದ್ದಲ್ಲಿ ಅವನನ್ನು ನಿಯೋಜನೆಗೆ ಪರಿಗಣಿಸತಕ್ಕದ್ದಲ್ಲ.ಅಲ್ಲದೆ, ಒಬ್ಬ ಬ ಸರ್ಕಾರಿ ನೌಕರನನ್ನು ಒಂದೇ ಹುದ್ದೆಗೆ ಮತ್ತೆ ಮತ್ತೆ ನಿಯೋಜನೆ ಮಾಡುವುದನ್ನು ನಿಷೇಧಿಸಲಾಗಿದೆ.

ಅವರ ಪ್ರಕಾರ, ಸದರಿ ವ್ಯಕ್ತಿಯನ್ನು ಆತನ ಮಾತೃ ಇಲಾಖೆಗೆ ಹಿಂದಿರುಗಿಸುವ ಅಗತ್ಯವಿದೆ.

25.ದಿನಾಂಕ: 22.11.2019 ರಂದು ಈ ನ್ಯಾಯಾಲಯದ ಮುಂದೆ ಅಂಥ ವಾದವನ್ನು ಮಾಡಿದಾಗ, ಮಂಜುನಾಥ್ ಅವರು ಪ್ರಸ್ತುತ ನಿಯೋಜನೆಯ ಹುದ್ದೆಯಲ್ಲಿ ಐದು ವರ್ಷಗಳನ್ನು ಪೂರ್ಣಗೊಳಿಸಿದ್ದರೆ, ಆ ಸಂದರ್ಭದಲ್ಲಿ ಅವರನ್ನು ತಮ್ಮ ಮಾತೃ ಇಲಾಖೆಗೆ ಹಿಂದಿರುಗಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಎಂದು ಈ ನ್ಯಾಯಾಲಯವು-ಪ್ರತಿವಾದಿ-ರಾಜ್ಯಕ್ಕೆ ಸೂಚಿಸಿದ್ದು, ಸದರಿ ಆದೇಶವನ್ನು ಈ ಕೆಳಗಿನಂತೆ ಓದಲಾಗಿದೆ:

66 " ಎಫ್.ಆರ್. (ರಿಟ್ ಅರ್ಜಿ)ಸಂಖ್ಯೆ: 52093/2019 ರೊಂದಿಗೆ 26.11.2019 ರಂದು ಈ ವಿಷಯವನ್ನು ಪಟ್ಟಿ ಮಾಡುವುದು.

ಅದೇ ಸಮಯದಲ್ಲಿ, ಮಂಜುನಾಥ್ ಅವರ ವಿಷಯದಲ್ಲಿ ಪೂರ್ಣಗೊಳಿಸಿರುವುದಾಗಿ ಹೇಳಲಾದ ನಿಯೋಜನೆಯ ಐದು ವರ್ಷಗಳ ಅವಧಿಯನ್ನು ಮೀರಿ, ಅವರನ್ನು ದೇವನಹಳ್ಳಿಯ I ನೇ ಶ್ರೇಣಿಯ ತಹಶೀಲ್ದಾರರನ್ನಾಗಿ ನೇಮಿಸಲು ನಿರ್ದೇಶಿಸುವಾಗ, ಈ ನ್ಯಾಯಾಲಯದದಿನಾಂಕ: 08.11.2019 ರ ಆದೇಶದಲ್ಲಿನ 5 ನೇ ಕಂಡಿಕೆಯಲ್ಲಿ ತಪ್ಪಾಗಿದೆ ಎಂದು ಈ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಮಂಜುನಾಥ್ ಅವರು ಕಂದಾಯ ಇಲಾಖೆಯಲ್ಲಿ ನಿಯೋಜನೆಯ ಮೇಲೆ ಈಗಾಗಲೇ ಐದು ವರ್ಷಗಳನ್ನು ಪೂರ್ಣಗೊಳಿಸಿದ್ದಲ್ಲಿ, ಅವರ ಮಾತೃ ಇಲಾಖೆಗೆ (ಆರೋಗ್ಯ ಇಲಾಖೆ) ಅವರನ್ನು ಮರಳಿ ಕಳಿಸಲು ಸೂಕ್ತ ನಿರ್ಧಾರವನ್ನು ಕೈಗೊಳ್ಳುವ ಸರ್ಕಾರದ ಕಾರ್ಯಕ್ಕೆ ಈ ನ್ಯಾಯಾಲಯದದಿನಾಂಕ: 08.11.2019 ರ ಆದೇಶವು ಅಡ್ಡಿಪಡಿಸುವುದಿಲ್ಲ.ಯಾವುದೇ ಸಂದರ್ಭದಲ್ಲಿ, ಸದರಿ ವ್ಯಕ್ತಿಯ ಇತರ ಹಕ್ಕುಗಳನ್ನು, ಅವರು ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಪರಿಗಣಿಸಲಾಗುವುದು.ಅದನ್ನು ಈ ದಿನ ರಿಟ್ ಅರ್ಜಿಯೊಂದಿಗೆ ಸೇರಿಸಬೇಕೆಂದು ಈಗಾಗಲೇ ಆದೇಶಿಸಲಾಗಿದೆ.

26. ಈ ಮೇಲೆ ಹೇಳಲಾದ ಆದೇಶದ ಕಾರಣದಿಂದ, ಸರ್ಕಾರವು ಮಂಜುನಾಥ್ ಅವರ ಸೇವೆಯನ್ನು ಸಿ.ಆ.ಸು.ಇ.ಗೆ ಹಿಂತಿರುಗಿಸಲುದಿನಾಂಕ: 25.11.2019 ರಂದು ಆದೇಶವನ್ನು ಹೊರಡಿಸಿದೆ ಎಂದು ಕಂಡುಬಂದಿದೆ.ಈ ಹಿನ್ನೆಲೆಯಲ್ಲಿ, ಮಂಜುನಾಥ್ ಸಲ್ಲಿಸಿದ ರಿಟ್ ಅರ್ಜಿಸಂಖ್ಯೆ: 51199 ರಲ್ಲಿನ ರಿಟ್ ಅರ್ಜಿಯನ್ನು,ದಿನಾಂಕ: 25.11.2019 ರ ಆದೇಶದನ್ವಯ ಅವರನ್ನು ಸಿ.ಆ.ಸು.ಇ.ಗೆ ಹಿಂತಿರುಗಿಸುವ ಆದೇಶವನ್ನು ಪ್ರಶ್ನಿಸುವಲ್ಲಿ ಇನ್ನಷ್ಟು ಕೋರಿಕೆಯನ್ನು ಸೇರಿಸುವ ಮೂಲಕ ಅದನ್ನು ತಿದ್ದುಪಡಿ ಮಾಡಲಾಯಿತು.ರಿಟ್ ಅರ್ಜಿಯನ್ನು ತಿದ್ದುಪಡಿ ಮಾಡಲಾಗಿರುವ ಮತ್ತು ಹೆಚ್ಚುವರಿ ಮನವಿಯನ್ನು ಮಾಡಲಾಗಿರುವ ದೃಷ್ಟಿಯಿಂದ ಆ ಪ್ರಶ್ನೆಗೂ ಸಹ ಉತ್ತರಿಸಬೇಕಾದ ಅಗತ್ಯವಿದೆ.ಸದರಿ ರಿಟ್ ಅರ್ಜಿಯನ್ನು ಪರಿಗಣನೆಗಾಗಿ ತೆಗೆದುಕೊಂಡಾಗ, ಮಾನ್ಯ ಹಿರಿಯ ವಕೀಲರಾದ ಶ್ರೀ ಎ.ಎಸ್. ಪೊನ್ನಣ್ಣ ಅವರು ವರ್ಗಾವಣೆಯ ಮಾರ್ಗಸೂಚಿಗಳ 6 (ಬಿ) (1) ನೇ ನಿಯಮವು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ 16 (ಎ)(iv) ನೇ ನಿಯಮಕ್ಕೊಳಪಡುತ್ತದೆ ಎಂಬುದನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ಅದನ್ನು ಈ ಕೆಳಗಿನಂತೆ ಓದಲಾಗಿದೆ:

"16. ನೇಮಕಾತಿ ಮತ್ತು ಅರ್ಹತೆಗಳಿಗೆ ಸಂಬಂಧಿಸಿದ ನಿಯಮಗಳ ಸಡಿಲಿಕೆ.- ಈ ನಿಯಮಗಳಲ್ಲಿ ಅಥವಾ ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಿಸಿದಂತೆ ವಿಶೇಷವಾಗಿ ಮಾಡಿದ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು, ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ,

( ಎ) ಒಂದು ಹುದ್ದೆಗೆ ನೇಮಕ ಮಾಡಬಹುದು.

( i)

( 1)

(iii)

(iv) ರಾಜ್ಯ ಸಿವಿಲ್ ಸೇವೆಗಳ ದರ್ಜೆ- 1 ರಲ್ಲಿ, ನಿಯೋಜನೆ ಮೇಲೆ, ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾನಿಲಯ ಸೇವೆಯಲ್ಲಿ ವಿಶೇಷ ಅರ್ಹತೆ ಹೊಂದಿರುವ ಐದು ವರ್ಷ ಮೀರಿರದ ಅ ಂ ತಹ ಅವಧಿಗಾಗಿ ಸಮಾನ ಹುದ್ದೆಯನ್ನು ಹೊಂದಿರುವ ಒಬ್ಬ ವ್ಯಕ್ತಿಯನ್ನು ಮತ್ತು ಸರ್ಕಾರವು ಪ್ರತಿಯೊಂದು ಸಂದರ್ಭದಲ್ಲೂ ನಿರ್ಧರಿಸಬಹುದಾದಂತೆ ಅಂತಹ ನಿಬಂಧನೆಗಳ ಮೇಲೆ;

ಪರಂತು, ಒಂದು ಪ್ರಕರಣದ ವಿಶೇಷ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊ ಂ ಡು, ಖ ಂ ಡದ ಅಡಿಯಲ್ಲಿ ನಿಗದಿಪಡಿಸಲಾದಂತೆ, ನಿಯೋಜನೆಯ ಅವಧಿಯನ್ನು ಐದು ವರ್ಷ ಮೀರಿ ವಿಸ್ತರಿಸಬೇಕಾಗುತ್ತದೆ ಎಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಲಿಖಿತವಾಗಿ ದಾಖಲಿಸಬೇಕಾದ ಕಾರಣಗಳಿಗಾಗಿ, ಗರಿಷ್ಠ ಮೂರು ಮೂರು ವರ್ಷಗಳಿಗೆ ಒಳಪಟ್ಟು ಒಂದು ಸಲಕ್ಕೆ, ಒಂದು ವರ್ಷದ ಮುಂದಿನ ಅವಧಿಗೆ ಅದನ್ನು ವಿಸ್ತರಿಸಬಹುದು.ಹಾಗಿದ್ದರೂ, ವಿಸ್ತರಿಸಿದ ಅವಧಿ ಸೇರಿದಂತೆ ನಿಯೋಜನೆಯ ಒಟ್ಟು ಅವಧಿಯು ಎಂಟು ವರ್ಷಗಳನ್ನು ಮೀರತಕ್ಕದ್ದಲ್ಲ

27. ಈ ಮೇಲೆ ಹೇಳಲಾದ ಪರಂತುಕವನ್ನು ಅವಲಂಬಿಸುವ ಮೂಲಕ,ದಿನಾಂಕ: 12.07.2019 ರಂದು ಇದ್ದಂತೆ, ಮಂಜುನಾಥ್ ಅವರು ಕಂದಾಯ ಇಲಾಖೆಯಲ್ಲಿ ತಾವು ಮೊದಲಿದ್ದ ಸ್ಥಾನದಲ್ಲಿ ಐದು ವರ್ಷಗಳನ್ನು ಪೂರ್ಣಗೊಳಿಸಿರಲಿಲ್ಲ ಎಂದು ಮಾನ್ಯ ಹಿರಿಯ ವಕೀಲರು ಈ ನ್ಯಾಯಾಲಯವನ್ನು ನಂಬಿಸಲು ಪ್ರಯತ್ನಿಸಿದ್ದಾರೆ.ಅವರ ಪ್ರಕಾರ, ಮೊದಲಿಗೆ ಮಂಜುನಾಥ್ ಅವರನ್ನುದಿನಾಂಕ: 13.02.2013 ರ ಆದೇಶದ ಮೂಲಕ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ನಿಯೋಜಿಸಲಾಯಿತು ಮತ್ತು ಆ ನಂತರ,ದಿನಾಂಕ: 13.02.2015 ರಂದು ಅವರನ್ನು ತಮ್ಮ ಮಾತೃ ಇಲಾಖೆಗೆ ಹಿಂದಿರುಗಿಸಲಾಯಿತು.ಅಲ್ಲಿ ಅವರನ್ನು ಅಧೀನ ಕಾರ್ಯದರ್ಶಿ ಹುದ್ದೆಗೆ ಪರಿಗಣಿಸಲಾಯಿತು ಮತ್ತು ಸದರಿ ಆದೇಶದಲ್ಲಿ ಅವರು ಆ ಹುದ್ದೆಯಲ್ಲಿ ಒಂದು ದಿನ ಮುಂದುವರೆಯತಕ್ಕದ್ದೆಂದು ಮತ್ತು ಆದಾದ ನಂತರ, ಅವರು ಮತ್ತೊಮ್ಮೆ ಕಂದಾಯ ಇಲಾಖೆಗೆ ಮರು ನೇಮಕಗೊಳ್ಳುತ್ತಾರೆಂದು ಅಭಿಪ್ರಾಯಪಡಲಾಯಿತು.ದಿನಾಂಕ: 13.02.2015 ರ ಸದರಿ ಆದೇಶವು, ಅವರು ತಮ್ಮ ಮಾತೃ ಇಲಾಖೆಯಲ್ಲಿ ಒಂದು ದಿನ ಇರತಕ್ಕದ್ದೆಂದು ಹೇಳಿದ್ದಾಗ್ಯೂ, ಅವರು ತಮ್ಮ ಮಾತೃ ಇಲಾಖೆಯಲ್ಲಿದಿನಾಂಕ: 03.03.2015 ರ ವರೆಗೆ ಮುಂದುವರೆದರು ಮತ್ತುದಿನಾಂಕ: 03.03.2015 ರಂದು ತಿಪಟೂರಿನ ತಹಶೀಲ್ದಾರ್ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲು ಮತ್ತೊಮ್ಮೆ ಕಂದಾಯ ಇಲಾಖೆಗೆ ನಿಯೋಜಿಸಿದರು ಎಂಬುದು ಮಂಜುನಾಥ್ ಅವರ ವಾದವಾಗಿದೆ.ಅವರ ಪ್ರಕಾರ, ತಾಂತ್ರಿಕವಾಗಿ ಅವರುದಿನಾಂಕ: 03.03.2015 ರಿಂದ ನಿಯೋಜನೆಯಲ್ಲಿದ್ದುದರಿಂದದಿನಾಂಕ: 12.07.2019 ರಂದು ಇದ್ದಂತೆ, ನಿಯೋಜನೆ ಮೇಲೆ ಒಂದು ಸ್ಥಾನದಲ್ಲಿ ಐದು ವರ್ಷಗಳ ಅವರ ಅವಧಿಯು ಪೂರ್ಣಗೊಂಡಿಲ್ಲ.ಆದುದರಿಂದ, ಈ ನ್ಯಾಯಾಲಯದದಿನಾಂಕ: 22.11.2019 ರ ಆದೇಶಕ್ಕೆ ಅನುಸಾರವಾಗಿ ಸರ್ಕಾರವು ಹೊರಡಿಸಿದದಿನಾಂಕ: 25.11.2019 ರ ಆದೇಶವು ಈ ನ್ಯಾಯಾಲಯವು ನೀಡಿದ ನಿರ್ದೇಶನವನ್ನು ತಪ್ಪಾಗಿ ಅರ್ಥೈಸಲ್ಪಟ್ಟಿದೆ.ದಿನಾಂಕ: 22.11.2019 ರ ಆದೇಶದಲ್ಲಿ, ಮಂಜುನಾಥ್ ಅವರು ಐದು ವರ್ಷಗಳನ್ನು ಪೂರ್ಣಗೊಳಿಸಿದ್ದಲ್ಲಿ, ಅವರನ್ನು ಮಾತೃ ಇಲಾಖೆಗೆ ಹಿಂತಿರುಗಿಸಲು ಪರಿಗಣಿಸತಕ್ಕದ್ದೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ ಎಂದು ಮಾನ್ಯ ಹಿರಿಯ ವಕೀಲರು ಸಮರ್ಥಿಸಿದ್ದಾರೆ.ಆದಾಗ್ಯೂ, ಸದರಿ ಆದೇಶವನ್ನು ಬಳಸಿಕೊಂಡು, ಅವರು ಐದು ವರ್ಷಗಳನ್ನು ಪೂರ್ಣಗೊಳಿಸುವುದಕ್ಕೆ ಮುಂಚೆಯೇ ಅವರನ್ನು ಮಾತೃ ಇಲಾಖೆಗೆ ಹಿಂದಿರುಗಲು ಪ್ರಯತ್ನಿಸಲಾಗಿದೆ.ಆದುದರಿಂದ,ದಿನಾಂಕ: 25.11.2019 ರ ಸದರಿ ಆದೇಶವನ್ನು ರದ್ದುಪಡಿಸಬೇಕಾಗಿದೆ.

28. ವಸ್ತುಸ್ಥಿತಿ ಹೀಗಿದ್ದಾಗ, ಮಂಜುನಾಥ್ ಅವರು ನಿಯೋಜನೆಯ ಮೇರೆಗೆ ತಹಶೀಲ್ದಾರರಾಗಿ ಅದಾಗಲೇ ಆರು ವರ್ಷಗಳು ಕಾರ್ಯ ನಿರ್ವಹಿಸಿದ್ದಾರೆಂದು ಮತ್ತು ವರ್ಗಾವಣೆಯ ಮಾರ್ಗಸೂಚಿಗಳ 6 (ಬಿ) (i) ರ ಹಿನ್ನೆಲೆಯಲ್ಲಿ ಒಂದು 0 ನೇಮಕ ಮತ್ತು ಇನ್ನೊಂದು ನೇಮಕದ ನಡುವಿನ ಎರಡು ವರ್ಷಗಳ ಕನಿಷ್ಠ ಕೂಲಿಂಗ್ ಆಫ್ ಅವಧಿಯು ಕಡ್ಡಾಯವಾಗಿದ್ದು ಅದನ್ನು ಪರಿಗಣಿಸಿಲ್ಲ.ಆದುದರಿಂದ, ವಿಷಯದ ಆ ಅಂಶವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ ಎಂಬ ಕಾರಣಕ್ಕಾಗಿ ಅರ್ಜಿದಾರರ ಪರ ಮಾನ್ಯ ಹಿರಿಯ ವಕೀಲರ ನಿವೇದನೆಯು ವಾಸ್ತವಿಕವಾಗಿ ತಪ್ಪಾಗಿದೆ ಎಂಬುದನ್ನು ಸಮರ್ಥಿಸಿಕೊಳ್ಳಲು ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು

ಪ್ರಯತ್ನಿಸಿರುತ್ತಾರೆ.ಈ ಹಿನ್ನೆಲೆಯಲ್ಲಿ,ದಿನಾಂಕ: 25.11.2019 ರ ಆದೇಶವು ಸಮರ್ಥನೀಯವಾಗಿದೆ ಹಾಗೂ ಅದನ್ನು ರದ್ದುಪಡಿಸಲಾಗದು ಎಂದೂ ಸಹ ಅವರು ಹೇಳಿದ್ದಾರೆ.

29. ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಎ.ಎಸ್. ಪೊನ್ನಣ್ಣ, ಅಜಿತ್ ಕುಮಾರ್ ರೈ ರವರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಶಿವಪ್ರಸಾದ್ ಶಾಂತನಗೌಡರ್ ಮತ್ತು ರಾಜ್ಯದ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರ ವಾದವಿವಾದಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ನಂತರ, ಸದ್ಯದ ಪ್ರಕರಣದಲ್ಲಿ ಈ ಮೇಲೆ ಉಲ್ಲೇಖಿಸಲಾದ ವರ್ಗಾವಣೆಯ ಮಾರ್ಗಸೂಚಿಗಳ 6 (ಬಿ) (i) ರಲ್ಲಿ 2 ವರ್ಷಗಳ ಕೂಲಿಂಗ್ ಆಫ್ ಪೀರಿಯಡ್ ಕಡ್ಡಾಯವಾಗಿರುವ ಕಾರಣ, ಮಂಜುನಾಥ್ ಅವರಿಗೆ ಅದನ್ನು ಜಾರಿಗೆ ತರದೆ ಇರುವಲ್ಲಿ ಸರ್ಕಾರವು ವರ್ಗಾವಣೆ ಮಾರ್ಗಸೂಚಿಗಳನ್ನು ನಿರ್ಲಕ್ಷಿಸಿದೆ ಎಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿದೆ.ಅಂತಹ ನಿಯೋಜನೆಯನ್ನು ಒಬ್ಬ ಅಧಿಕಾರಿಯು ಪೂರ್ಣಗೊಳಿಸಿದಾಗಲೆಲ್ಲಾ ಇದರಲ್ಲಿ ನಿರ್ಣಾಯಕವಾಗಿರುವ ಮುಂಚಿನ ನಿಯೋಜನೆಯಲ್ಲಿ ಅವರು ಐದು ವರ್ಷಗಳನ್ನು ಪೂರ್ಣಗೊಳಿಸಿರದಿದ್ದರೂ ಸಹ, ಇದನ್ನು ಅಗತ್ಯಪಡಿಸಲಾಗಿದೆ.ಈಗಾಗಲೇ ಕಂಡುಬಂದಿರುವಂತೆ, ಮಂಜುನಾಥ್ 2015 ರಿಂದ ತಿಪಟೂರಿನಲ್ಲಿ ಅಥವಾ ದೇವನಹಳ್ಳಿಯಲ್ಲಿ ತಹಶೀಲ್ದಾರ್ ಹುದ್ದೆಯಲ್ಲಿ ಐದು ವರ್ಷಗಳನ್ನು ಪೂರ್ಣಗೊಳಿಸಿಲ್ಲ.ಆದರೆ, ಅವರಿಗೆ ಬಡ್ತಿ ನೀಡಿದ್ದಾಗ 13 ದಿನಗಳ ಅವಧಿಗೆ ಅವರನ್ನು ತಮ್ಮ ಮಾತೃ ಇಲಾಖೆಗೆ ಕಳುಹಿಸಲಾಗಿದೆ.ಸದರಿ ಹುದ್ದೆಯಲ್ಲಿದ್ದ ಮೊದಲಿನ ಅವಧಿಯನ್ನು ಒಂದನೇ ವರ್ಗಾವಣೆಯೆಂದು ಮತ್ತು ತರುವಾಯದ ನೇಮಕವನ್ನು ಎರಡನೇ ವರ್ಗಾವಣೆಯೆಂದು ವಿಂಗಡಿಸಲಾಗಿದೆ.ಈ ಮಧ್ಯೆ, ವರ್ಗಾವಣೆ ಮಾರ್ಗಸೂಚಿಗಳ 6 (ಬಿ) (i) ಅನುಸಾರ, ಕಡ್ಡಾಯವಾಗಿ 2 ವರ್ಷಗಳ ಕೂಲಿಂಗ್ ಆಫ್ ಅವಧಿ ಇರಲೇಬೇಕಾಗಿದ್ದು, ಅದನ್ನು ಇಲ್ಲಿ ಪರಿಗಣಿಸಿಲ್ಲ.ಆದುದರಿಂದ, ಮಂಜುನಾಥ್ ಅವರ ನೇಮಕವು ಮೇಲೆ ಹೇಳಲಾದ ವರ್ಗಾವಣೆ ಮಾರ್ಗಸೂಚಿಗಳಿಗೆ ವಿರುದ್ಧವಾಗಿದೆ ಎಂದು ಪರಿಗಣಿಸುವುದು ಅಗತ್ಯ.

30. ಆದಾಗ್ಯೂ, ಈ ಸನ್ನಿವೇಶದಲ್ಲಿ ಮಾನ್ಯ ಹಿರಿಯ ವಕೀಲರು 16 (ಎ)(iv) ನೇ ನಿಯಮದ ಪರಂತುಕದೆಡೆಗೆ ನಮ್ಮ ಗಮನ ಸೆಳೆಯುತ್ತಾರೆ.ಅದರಲ್ಲಿ, ವಿಶೇಷ ಸಂದರ್ಭಗಳಲ್ಲಿ ನಿಯೋಜನೆಯ ಅವಧಿಯನ್ನು ಈ ಖಂಡದ ಮೇರೆಗೆ ಗೊತ್ತುಪಡಿಸಲಾದಂತೆ ಐದು ವರ್ಷಗಳಿಗೆ ಮೀರಿ ವಿಸ್ತರಿಸಬೇಕು ಎಂಬುದು ಸರ್ಕಾರದ ಅಭಿಪ್ರಾಯವಾಗಿದ್ದ ಸಂದರ್ಭದಲ್ಲಿ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಅದನ್ನು ಪರಿಗಣಿಸಿ, ಗರಿಷ್ಠ ಮೂರು ವರ್ಷಗಳಿಗೊಳಪಟ್ಟು ಒಂದು ಬಾರಿಗೆ ಒಂದು ವರ್ಷದ ಹೆಚ್ಚಿನ ಅವಧಿಗಾಗಿ ಅದನ್ನು ವಿಸ್ತರಿಸುವುದು ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

31. ಹಾಗಿದ್ದರೂ, ಸದ್ಯದ ಪ್ರಕರಣದಲ್ಲಿ, ಮಂಜುನಾಥ್ ಅವರ ನಿಯೋಜನೆಯನ್ನು ವಿಸ್ತರಿಸುವ ಆದೇಶ ಇಲ್ಲದಿರುವಾಗ, ಮಾತೃ ಇಲಾಖೆಯ ಹೊರಗಡೆ ಎರಡು ವರ್ಗಾವಣೆಗಳ ನಡುವೆ ಎರಡು ವರ್ಷಗಳ ಕೂಲಿಂಗ್ ಆಫ್ ಅವಧಿಯನ್ನು ನೀಡದಿರುವ ವಿಷಯದಲ್ಲಿ ಯಾವುದೇ ಹೆಚ್ಚಿನ ಕಾರಣವನ್ನು ನೀಡಿಲ್ಲ.ಆದುದರಿಂದ, 2 ವರ್ಷಗಳ ಕೂಲಿಂಗ್ ಆಫ್ ಅವಧಿಯನ್ನು ಪರಿಗಣಿಸದೆ,ದಿನಾಂಕ: 13.02.2015 ರಿಂದ ಮಾಡಿದ ನಿಯೋಜನೆಯನ್ನು ನವೀಕರಿಸುವಾಗ ರಾಜ್ಯವು ಗಂಭೀರ ತಪ್ಪನ್ನು ಎಸಗಿದೆ ಮತ್ತು ಆದುದರಿಂದ, ಎರಡನೇ ನಿಯೋಜನೆಯು ವರ್ಗಾವಣೆ ಮಾರ್ಗಸೂಚಿಗಳಿಗೆ ಅನುಸಾರವಾಗಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಅದರಂತೆ, ಮಂಜುನಾಥ್ ಅವರನ್ನು ತಮ್ಮ ಮಾತೃ ಇಲಾಖೆಗೆ ಹಿಂತಿರುಗಿಸುವುದಕ್ಕೆ ಸಂಬಂಧಿಸಿದದಿನಾಂಕ: 25.11.2019 ರ ಆದೇಶವು ನ್ಯಾಯೋಚಿತವಾಗಿರುವುದು ಕಂಡುಬರುತ್ತದೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಅದಕ್ಕನುಸಾರವಾಗಿ, ಮೇಲೆ ಹೇಳಲಾದ ಅಭಿಪ್ರಾಯೋಕ್ತಿಗಳ ಹಿನ್ನೆಲೆಯಲ್ಲಿ, ಮಂಜುನಾಥ್ ಅವರನ್ನು ದೇವನಹಳ್ಳಿ ತಹಶೀಲ್ದಾರರನ್ನಾಗಿ ನೇಮಿಸುವಲ್ಲಿದಿನಾಂಕ: 12.07.2019 ರಂದು ಹೊರಡಿಸಲಾದ ಅಧಿಸೂಚನೆಯನ್ನು ಅನುಮತಿಸಲಾಗದು.

32. ಈಗ ಉಳಿದಿರುವುದೇನೆಂದರೆ, ಅದು ಶ್ರೀ ಅಜಿತ್ ಕುಮಾರ್ ರೈ ಅವರನ್ನು ದೇವನಹಳ್ಳಿಯ ತಹಶೀಲ್ದಾರರನ್ನಾಗಿ ನೇಮಿಸುವಲ್ಲಿ ಹೊರಡಿಸಿದದಿನಾಂಕ: 21.08.2019 ರ ಅಧಿಸೂಚನೆಯಾಗಿದೆ.ಅಂಗೀಕರಿಸಲಾದಂತೆ, ಮಂಜುನಾಥ್ ಅವರನ್ನು ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಗೆ ವರ್ಗಾವಣೆ ಮಾಡುವುದನ್ನು ತಡೆಯುವಲ್ಲಿ ತಡೆ ಆದೇಶವು ಜಾರಿಯಲ್ಲಿದ್ದಾಗ ಆ ಅವಧಿಯಲ್ಲಿ, ರಾಜ್ಯವು ಈ ಅಧಿಸೂಚನೆಯನ್ನು ಹೊರಡಿಸಿದೆ.ವಿಷಯ ಹೀಗಿದ್ದಾಗ, ರಾಜ್ಯವು, ಅರ್ಜಿಸಂಖ್ಯೆ: 4675/2019 ರಲ್ಲಿ ಹೊರಡಿಸಲಾದದಿನಾಂಕ: 31.07.2019 ರ ಮಧ್ಯಂತರ ಆದೇಶವನ್ನು ಮಾರ್ಪಾಡು ಮಾಡುವುದಕ್ಕೆ

ಕೋರಬೇಕಿತ್ತು ಅಥವಾ ಮೇಲೆ ಹೇಳಲಾದ ಮಧ್ಯಂತರ ಆದೇಶವನ್ನು ತೆರವುಗೊಳಿಸಲು ಕೋರಿ, ಅರ್ಜಿ ಸಲ್ಲಿಸಬೇಕಿತ್ತು ಮತ್ತು ಆ ನಂತರ, ಅಜಿತ್ ಕುಮಾರ್ ರೈ ಅವರನ್ನು ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಗೆ 135 ನೇಮಿಸುವಲ್ಲಿದಿನಾಂಕ: 21.08.2019 ರ ಅಧಿಸೂಚನೆ ಹೊರಡಿಸುವುದನ್ನು ಪರಿಗಣಿಸಬೇಕಿತ್ತು.ಆದ್ದರಿಂದ, ತಡೆ ಆದೇಶವು ಜಾರಿಯಲ್ಲಿದ್ದಾಗ ಮಧ್ಯಂತರ ಅವಧಿಯಲ್ಲಿ ಹೊರಡಿಸಲಾದ ಈ ಅಧಿಸೂಚನೆಯನ್ನು ಸಹ ಜಾರಿಗೊಳಿಸುವಂತಿಲ್ಲ.ತದನುಸಾರವಾಗಿ, ಆ ಅಧಿಸೂಚನೆಯನ್ನೂ ಸಹ ರದ್ದುಪಡಿಸುವ ಅಗತ್ಯವಿದೆ.ಅದಕ್ಕನುಸಾರವಾಗಿ ಇದನ್ನು ಆದೇಶಿಸಲಾಗಿದೆ.

33. ಈಗ ಉಳಿದಿರುವುದೇನೆಂದರೆ, ಪ್ರಸ್ತುತ, ದೇವನಹಳ್ಳಿಯ ತಹಸೀಲ್ದಾರ್ ಹುದ್ದೆಯು ಖಾಲಿ ಇರುವುದರಿಂದ, ಅದನ್ನು ಸ್ವಾರ್ಥಕ್ಕಾಗಿ ಸ್ವಾಧೀನಪಡಿಸಿಕೊಳ್ಳುವ ಸಾಮರ್ಥ್ಯವುಳ್ಳ ಸರ್ಕಾರಿ ಅಧಿಕಾರಿಯ ಪರವಾಗಿ ಮತ್ತೊಮ್ಮೆ ಹರಾಜು ಹಾಕುವುದಕ್ಕೆ ಅವಕಾಶವಿದೆ ಎಂಬ ಸ್ಪಷ್ಟ ಸೂಚನೆಯನ್ನು ಆ ಮೂಲಕ ನೀಡಲಾಗಿದೆ.ಈ ಸನ್ನಿವೇಶದಲ್ಲಿ, ಎಂ. ರಾಜಣ್ಣ ಅವರ ಸಂದರ್ಭದಲ್ಲಿ, ಈ ವಿಷಯದಲ್ಲಿ ಸಾಕಷ್ಟು ತೊಂದರೆ ಮತ್ತು ಅನ್ಯಾಯವಾಗಿದೆ ಎಂದು ಈ ನ್ಯಾಯಾಲಯವು ಅಭಿಪ್ರಾಯ ನೀಡಿದೆ.ಈಗಾಗಲೇ ಗಮನಿಸಲಾದಂತೆ, ಸದರಿ ಹುದ್ದೆಗೆ ನೇಮಕಾತಿ ಕೋರಲು ಅವರಿಗೆ ಯಾವುದೇ ಹಕ್ಕು ಇರಲಿಲ್ಲ.ಆದುದರಿಂದ, ಸದರಿ ಹುದ್ದೆಗೆ ಅವರನ್ನು ನೇಮಕ ಮಾಡತಕ್ಕದ್ದಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಇಂಥ ಸಂದರ್ಭದಲ್ಲಿ, ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಗೆ ನೇಮಕ ಮಾಡುವುದಕ್ಕೆ ಹೊಸ ಆದೇಶವನ್ನು ಹೊರಡಿಸುವ ಅಗತ್ಯವಿದೆ ಎಂದು ರಾಜ್ಯವು ಅಭಿಪ್ರಾಯಪಟ್ಟಲ್ಲಿ, ವಾಸ್ತವಿಕ ಸನ್ನಿವೇಶದಲ್ಲಿ ಅಜಿತ್ ಕುಮಾರ್ ರೈ ಅವರ ಹೆಸರನ್ನು ಪರಿಗಣಿಸಬಹುದು.ಆದಾಗ್ಯೂ, ಸದರಿ ಹುದ್ದೆಗೆ ಅವರನ್ನಾಗಲೀ ಅಥವಾ ಇತರ ಯಾರೇ ವ್ಯಕ್ತಿಯನ್ನಾಗಲೀ ಪರಿಗಣಿಸುವುದು ಎದುರುದಾರ ರಾಜ್ಯಕ್ಕೆ ಬಿಟ್ಟ ವಿಷಯವಾಗಿದೆ.ಅದಕ್ಕೆ ಸಂಬಂಧಿಸಿದಂತೆ, ಯಾವುದೇ ಸಂದರ್ಭದಲ್ಲಿಯೂ, ಈ ನ್ಯಾಯಾಲಯವು ಯಾವ ನಿರ್ದೇಶನವನ್ನೂ ನೀಡುವುದಿಲ್ಲ.

ಈ ಅಭಿಪ್ರಾಯೋಕ್ತಿಗಳೊಂದಿಗೆ, ಈ ಎರಡು ರಿಟ್ ಅರ್ಜಿಗಳನ್ನು ವಿಲೆ ಮಾಡಲಾಗಿದೆ.